ನಂಬರು	ಸರ್ಕಲ್	ಮೊಬಲಗ	
B/28 77284	ಮದ್ರಾಸ್	500	ಶಿವಮೊಗ್ಗೆಯಲ್ಲಿರುವ ಮಾರವಾಡಿ ಮನ್ನೆ ರಾಮಾಜಿ, ಹೀರೋಜಿ ಮತ್ತು ಘ್ರಾಮಜಿ.
„ 77304	ಡಿಟೋ	500	
„ 72348	ಡಿಟೋ	500	
„ 74126	ಡಿಟೋ	500	
ನಂಬರು	ಡಿಟೋ		ಶಿವಮೊಗ್ಗೆ ಇಷ್ಟಾರ್ 3ನೇ ರಿಜಿಮೆಂಟ್ 1ನೇ ರಿಸಾಲೆ ಜಮೇದಾರ್ ಬಾಜೀರಾವ್ ಸಿಂಧೆ.
B/42 10229 ಯಡಭಾಗ	ಟಿಡೋ	20	

ಇದರಡಿ ನಮೂದಿಸಲ್ಪಡುವ ಕರ್ರೆಸಿ ನೋಟುಗಳ ತುಕಡೆಗಳು ಶಿವಮೊಗ್ಗೆಯಿಂದ ಬೆಂಗಳೂರಿಗೆ ಹೋಗುವಲ್ಲಿ ಹೋಗಿರುತ್ತವೆ.

ನಂಬರು	ಮೊಬಲಗು	ಹಕ್ಕುದಾರೆ
B/36 42247 ಬಲಭಾಗ	5 0 0	ಅನಂತಪುರದಲ್ಲಿರುವ ಸಾಹುಕಾರ ವೆಂಕಪ್ಪ.
B/30 75637 ಎಡಭಾಗ	20 0 0	
B/38 99516 ಎಡಭಾಗ	100 0 0	

ಮದರಾಸ್ ರೈಯಿಲ್‌ವೇ.

ತಾರೀಖು 23ನೇ ಮೇ 1876.

ಕೆರೋಸಿಯರ್ ಯಣ್ಣೆ.

ಜೂನ್ ಗುರ್ರೆ ತಾರೀಖು ಲಾಗಾಯಿತು ವ ಆ ತರುವಾಯ ಕೆರೋಸಿಯರ್ ಯಣ್ಣೆ 6 ಟನ್‌ಗಳಿಗೆ ಕಮ್ಮೀ ಯಿಲ್ಲದೆ 300 ಮೈಲಿಗಳಿಗೆ ಕಮ್ಮೀ ಯಿಲ್ಲದ ಫಾಸಲೆಗೆ ಕಳುಹಿಸತಕ್ಕ ಬಗ್ಗೆ ಟನ್ 1ಕ್ಕೆ ದರ ಮೈಲ್ 10 ಕಾಸುಗಳ ಮೇರೆ ಕಮ್ಮೀ ಚಾರ್ಜು ಹಾಕಲ್ಪಡುವದು.

H. E. CHURCH,
Traffic Manager.

MYSORE GOVERNMENT PRESS, BANGALORE—1876.

ಬೆಂಗಳೂರು, ಶನಿವಾರ, ಜೂಲೈ ತಾ॥ 1, ಸನ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ತಾರೀಖು 20ನೇ ಏಪ್ರೆಲ್ 1876.

ಮೈಸೂರು ಷಹರಿಗೆ ಜಲವಸತಿಯುಂಟು ಮಾಡುವ ಅಂಶವನ್ನು ಕುರಿತ ಈ ಕೆಳಗೆ ಕಂಡ ಕಾಗದಪತ್ರಗಳು ಸಕಲ ಜ
ಗಳಿಗೂ ತಿಳಿಯುವ ಬಗ್ಗೆ ಪ್ರಕಟಸಲ್ಪಟ್ಟಿವೆ.

"ಬಮೋಜೀಬ್ ಹುಕ್ಕುಂ,"

W. R. JOHNSON, *Lieut-Col.,*
Offg. Secy. P. W. D.

ಮರಮ್ಮತ್ ಇಲಾಖಾದಲ್ಲಿ, ಮೈಸೂರು ಶೀಮೆಯ ಚೀಫ್ ಕಮಿಷನರ್ ಸಾಹೆಬರವರ ಪ್ರೊಸೀಡಿಂಗ್ಸ್,

ತಾರೀಖು 12ನೇ ಏಪ್ರೆಲ್ 1876.

ಈ ಕೆಳಗೆ ನಮೂದಿಸುವ ಕಾಗದ ಪತ್ರಗಳು ಓದಲ್ಪಟ್ಟವು.

1. ಅಷ್ಟಗ್ರಾಮ ಡಿವಿಜನ್ ಕಮಿಷನರವರಿಂದ ಬಂದ, 1875ನೇ ಏಪ್ರೆಲ್ 5ನೇ ಮರ್ಕುಂ 7ನೇ ನಂಬರ್ ಲೆಟರ್.
2. ಅದರ ಮೇಲೆ ಚೀಫ್ ಇಂಜನಿಯರವರಿಂದ ಬರೆಯಲ್ಪಟ್ಟ, 1875ನೇ ಜೂನ್ 15ನೇ ಮರ್ಕುಂ ಮಿಮೋ (ಯಾನೇ
ಯಾದಾಸ್ತು.
3. ಕಲಸವಾಡೀಯಲ್ಲಿ ಯಂತ್ರದಿಂದ ನೀರು ತೆಗೆಯುವ ಸಲಹೆಯನ್ನು ಕುರಿತು ಚೀಫ್ ಇಂಜನಿಯರವರು ಬರೆದ 1876ನೇ
ಮಾರ್ಚಿ 4ನೇ ಮರ್ಕುಮಿನ ಯಾದಾಸ್ತು.
4. ನವೇಸಿರ್ ಜಲವಸತಿ ಕಾಮಗಾರೀ ವಿಷಯದಲ್ಲಿ ಚೀಫ್ ಇಂಜನಿಯರವರು ಬರೆದ 1876ನೇ ಮಾರ್ಚಿ 10ನೇ ಮ
ರ್ಕುಂ ಯಾದಾಸ್ತು.

ಅಷ್ಟಗ್ರಾಮದ ಕಮಿಷನರ್ ಆಫೀ
ತಾರೀಖು 5ನೇ ಏಪ್ರೆಲ್ 1875

ಜನರಲ್ ನಂಬರ್ 7
ಪ—ವ—ಇ ನಂ. 2

ಮೈಸೂರು ಚೀಫ್ ಕಮಿಷನರವರ ಪ—ವ—ಇ ಸೆಕರ್‌ಟೆರಿಯವರಿಗೆ.

ಮೈಸೂರು ಷಹರಿಗೆ ಜಲವಸತಿಯನ್ನು ಕಲ್ಪಿಸುವ ಅಂಶದಲ್ಲಿ ನಡೆದ ಹಿಂದಿನ ಕಾಗದ ಪತ್ರಗಳನ್ನು ಅನ
ಸರಿಸಿ, ಪೂರ್ಣಯ್ಯನವರ ನಾಲಾವನ್ನು ಉಪಯೋಗಿಸಿಕ್ಕೊಳ್ಳುವದರ ಸಾಧ್ಯತೆಯನ್ನು ಕುರಿತು ಕೆಲವು ತಾತ್ಪ
ರ್ಯಗಳನ್ನು ಶ್ರುತಪಡಿಸುತ್ತೇನೆ. ಈ ತಾತ್ಪರ್ಯಗಳು, ಕಾವೇರೀ ನೀರು ಮೈಸೂರು ಪಟ್ಟಣದವರಿಗೆ ಬಂತೆಂಬದಾಗಿ
ಮೈಸೂರು ಪ್ರಜೆಗಳು ಖಂಡಿತವಾಗಿ ಹೇಳಿದ್ದರ ನಿಜಸ್ಥಿತಿಯನ್ನು ಕುರಿತು, ಅವರುಗಳು ಬಾರ್‌ಬಾರ್ ಬಹಳವಾಗಿ
ಬೇಡಿಕ್ಕೊಂಡದ್ದರ ಮೇಲೆ ಮಾಡಲ್ಪಟ್ಟ ಅಜಮಾಯಿಷಿಯ ಫಲವಾಗಿರುತ್ತವೆ.

492

ಮೈಸೂರ ಗೆಜೆಟ್.

ನಂ 26. ಉಪ ಪತ್ರಿಕೆ.

... ದಿಂದ ಫ... ಷ್ ಆದ್ದು.

ಬೆಂಗಳೂರು, ಶನಿವಾರ, ಜೂಲೈ ... 187...

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ತಾರೀಖು 20ನೇ ಏಪ್ರೆಲ್ 1876.

ಮೈಸೂರು ಷಹರಿಗೆ ಜಲವಸತಿಯುಂಟು ಮಾಡುವ ಅಂಶವನ್ನು ಕುರಿತ ಈ ಕೆಳಗೆ ಕಂಡ ಕಾಗದಪತ್ರಗಳು ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಸಲ್ಪಟ್ಟವೆ.

"ಬಮೋಜೀಬ್ ಹುಕ್ಕುಂ,"
W. R. Johnson, *Lieut.-Col.*,
Offg. Secy. P. W. D.

ಮರಮ್ಮತ್ ಇಲಾಖಾದಲ್ಲಿ, ಮೈಸೂರು ಶೀಮೆಯ ಚೀಫ್ ಕಮ್ಮಿಷನರ್ ಸಾಹೇಬರವರ ಪ್ರೊಸೀಡಿಂಗ್ಸ್,
ತಾರೀಖು 12ನೇ ಏಪ್ರೆಲ್ 1876.

ಈ ಕೆಳಗೆ ನಮೂದಿಸುವ ಕಾಗದ ಪತ್ರಗಳು ಓದಲ್ಪಟ್ಟವು.

1. ಅಷ್ಟಗ್ರಾಮ ಡಿವಿಜನ್ ಕಮ್ಮಿಷನರವರಿಂದ ಬಂದ, 1875ನೇ ಏಪ್ರೆಲ್ 5ನೇ ಮುರ್ಕುಂ 7ನೇ ನಂಬರ್ ಲೆಟರ್.
2. ಅದರ ಮೇಲೆ ಚೀಫ್ ಇಂಜನಿಯರವರಿಂದ ಬರೆಯಲ್ಪಟ್ಟ, 1875ನೇ ಜೂನ್ 15ನೇ ಮುರ್ಕುಂ ಮಿಮೋ (ಯಾನೇ ಯಾದಾಸ್ತು).
3. ಕಲಸವಾಡೀಯಲ್ಲಿ ಯಂತ್ರದಿಂದ ನೀರು ತೆಗೆಯುವ ಸಲಹೆಯನ್ನು ಕುರಿತು ಚೀಫ್ ಇಂಜನಿಯರವರು ಬರೆದ 1876ನೇ ಮಾರ್ಚಿ 4ನೇ ಮುರ್ಕುಮಿನ ಯಾದಾಸ್ತು.
4. ನವೇಸಿರ್ ಜಲವಸತಿ ಕಾಮಗಾರೀ ವಿಷಯದಲ್ಲಿ ಚೀಫ್ ಇಂಜನಿಯರವರು ಬರೆದ 1876ನೇ ಮಾರ್ಚಿ 10ನೇ ಮುರ್ಕುಂ ಯಾದಾಸ್ತು.

ಜನರಲ್ ನಂಬರ್ 7
ಪ—ವ—ಇ ನಂ. 2

ಅಷ್ಟಗ್ರಾಮದ ಕಮ್ಮಿಷನರ್ ಆಫೀ...
ತಾರೀಖು 5ನೇ ಏಪ್ರೆಲ್ 1875

ಮೈಸೂರು ಚೀಫ್ ಕಮ್ಮಿಷನರವರ ಪ—ವ—ಇ ಸೆಕರಟೆರಿಯವರಿಗೆ.

ಮೈಸೂರು ಷಹರಿಗೆ ಜಲವಸತಿಯನ್ನು ಕಲ್ಪಿಸುವ ಅಂಶದಲ್ಲಿ ನಡೆದ ಹಿಂದಿನ ಕಾಗದ ಪತ್ರಗಳನ್ನು ಅನುಸರಿಸಿ, ಪೂರ್ಣಯ್ಯನವರ ನಾಲಾವನ್ನು ಉಪಯೋಗಿಸಿಕ್ಕೊಳ್ಳುವದರ ಸಾಧ್ಯತೆಯನ್ನು ಕುರಿತು ಕೆಲವು ತಾತ್ಪರ್ಯಗಳನ್ನು ಶ್ರುತಪಡಿಸುತ್ತೇನೆ. ಈ ತಾತ್ಪರ್ಯಗಳು, ಕಾವೇರೀ ನೀರು ಮೈಸೂರು ಪಟ್ಟಣದವರಿಗೆ ಬಂತೆಂಬದಾಗಿ ಮೈಸೂರು ಪ್ರಜೆಗಳು ಖಂಡಿತವಾಗಿ ಹೇಳಿದ್ದರ ನಿಜಸ್ಥಿತಿಯನ್ನು ಕುರಿತು, ಅವರುಗಳು ಬಾರ್‌ಬಾರ್ ಬಹಳವಾಗಿ ಬೇಡಿಕೊಂಡದ್ದರ ಮೇಲೆ ಮಾಡಲ್ಪಟ್ಟ ಅಜಮಾಯಿಷಿಯ ಫಲವಾಗಿರುತ್ತವೆ.

1807ನೇ ಇಸವಿ ಮಾರ್ಚಿ 27ನೇ ಮ ರ್ದ್ಭಂ ಫೋರ್ಟ ಸೆಂಟ್ ಜಾರ್ಜ್ ಚೀಫ್ ಸೆಕರ್ ರಿ ಯವರಿಗೆ ಬರೆದ ಲೆಟರಿನ 9ನೇ ಕಲಂ

2. ಕರ್ನಲ್ ವಿಲ್ಕಸ್ ಸಾಹೆಬರ ವಾಕ್ಯದ ಪ್ರಮಾಣದ ಮೇಲೆ ಪೂರ್ವವೇ ತಿಳಿಸಲ್ಪಟ್ಟ ಮೇರೆಗೆ ಸ್ನಾನ ಪಾನಾದಿ ಸಾಮಾನ್ಯ ಉಪಯೋಗಕ್ಕೆ ನೀರಿನ ವಿಷಯದೊಳಗೆ ಮೈಸೂರು ಪ್ರಜೆಗಳು ಅನುಭವಿಸುವ ಪ್ರಬಲ ದುರವಸ್ಥೆಯನ್ನು ನಿವಾರಣೆ ಮಾಡುವಂಥಾ ಇದರ ಪ್ರಥಮೋದ್ದೇಶ್ಯದೊಡನೆ ಕಾವೇರೀ ಪುಣ್ಯ ತೀರ್ಥವು ಹಿಂದೂ ಪಟ್ಟಣವಾದ ಮೈಸೂರಿಗೆ ಪ್ರವರ್ತಿಸುವಂತೆ ಮಾಡುವ ಕೋರಿಕೆಯೂ ಸಹಕಾರಿಯಾಗಿ ಶೇರಿದಾಗ್ಯೂ ಸದರೀ ಕಾಲ್ವೆಯಿಂದ ವಿಶೇಷ ಸಾಗುವಳೀಯಾಗಿ ತನ್ಮೂಲಕದಲ್ಲಿ ಕಾಮಗಾರಿಯು ಲಾಗವಡಿಗೆ ಪ್ರತಿಯಾಗಿ ಕೆಲವು ಮಟ್ಟಿಗೆ ಹುಟ್ಟುವಳೀ ಯಾಗಬಹುದೆಂತಲೂ ನಿರಿಕ್ಷಿಸಲ್ಪಟ್ಟಿತು.

ಈ ವಿಷ[illegible]ಯದ ನಿಜಸ್ಥಿತಿಯನ್ನು ತಿಳಿದುಕೊಳ್ಳುವದಕ್ಕೆ ಕರ್ನಲ್ ವಿಲ್ಕಸ ಯವರಿಗೆ ಬಹು ಉತ್ತಮವಾದ ಸದ[illegible]ಗಳಿದ್ದ ವೆಂದೂಹಿಸುವದು ಸಕಾರಣವಾಗಿದೆ. ಆದ್ದರಿಂದ ಈ ಚಿಗೆ ಇಷ್ಟುಕಾಲ ಕಳೆದು ಹೋದ ಮೇಲೆ ಅ[illegible] ಬರೆದಿರುವ ಅಂಶಗಳನ್ನೇ ಈ ವಿಷಯದಲ್ಲಿ ಪ್ರಮಾಣವನ್ನಾಗಿ ಅಂಗೀಕರಿಸ ಬಹುದಾಗಿಇದೆ. ಸದರೀ [illegible]ಮಗಾರೀಗೆ ಮತ ಸಂಬಂಧವಾದ ಉದ್ದೇಶ ವೊಂದು ಕಾರಣವಾಗಿತ್ತೆಂಬದು ವಸ್ತುತಃ ಕೆಲವು ಸಮಯಗಳಲ್ಲಿ [illegible]ಕರಿಸಲ್ಪಟ್ಟಿತು. ಇದಕ್ಕೆ ಪ್ರತಿಯಾಗಿ ಅಷ್ಟುಭಾರೀಲಾಗುವಡು ಉಳ್ಳ ಕಾಮಗಾರೀಯನ್ನು ವಹಿಸಿದ್ದಕ್ಕೆ [illegible]ಂಟಾದ ಕಾರಣಗಳ ಪೈಕಿ ಮತಸಂಬಂಧವಾದದ್ದೇ ಒಂದಾಗಿತ್ತೆಂದು ಅನೇಕ ನೇಟಿವ್‌ಗಳು ಯೋಚಿಸುವಂತೆ ಕಂ[illegible] ಇದ್ದೇನೆ.

4. ಜನಗಳ ಪರಂಪರೆ ಯಾದ ಹೇಳಿಕೆ ಇರುವದೇನಂದರೆ ಪೂರ್ಣಯ್ಯನವರು ಕೆಲವು ಕಾರಣಗಳಿಂದ [illegible]ರಂಗಪಟ್ಟಣವನ್ನೇ ಉತ್ತಮವೆಂದೆಣಿಸಿ ಮೈಸೂರು ಪಟ್ಟಣವನ್ನು ಈ ಶೀಮೆಯ ರಾಜಧಾನಿಯನ್ನಾಗಿ ಯೇ[illegible]ರ್ಪಡಿಸುವ ಅಂಶದಲ್ಲಿ ಸ್ವಯಂ ಇಷ್ಟವಿಲ್ಲದವರಾಗಿ ಇದ್ದರೆಂಬುವದು, ಇತರ ಕಾರಣಗಳ ಪೈಕಿ, ಹಿಂದೂ ಪಟ್ಟಣ ವನ್ನಾಗಿ ಮಾಡಬೇಕಾದರೆ ಪುಣ್ಯನದಿ ಯಾದ ಕಾವೇರೀ ಯಿಂದ ಪರಿವೃತವಾದ ಒಂದು ದ್ವೀಪಕ್ಕೆ ಸಮಾನವಾದ ಸ್ಥಳ ಯಾವದೂ ಇರಲಾರದೆಂಬದು ಒಂದಾಗಿತ್ತು. ಇಂಥ ಅವರ ಉದ್ದೇಶ್ಯವು ಪ್ರಸಿದ್ಧವಾಗಿಯೇ ಇದದ್ದರಿಂದ, ಶ್ರೀರಂಗಪಟ್ಟಣ ಜಯಿಸಲ್ಪಟ್ಟ ಕೆಲವು ದಿವಸದ ಮೇಲೆ ಕಾವೇರಿಯು ನೀರನ್ನು ಮೈಸೂರಿಗೆ ತರತಕ್ಕ ಒಂದು [illegible]ಪಾಯವು ಸಾಧ್ಯವಾಗಿಯೂ, ಅಲ್ಲಿ ನೀರಿಗೆ ಉಂಟಾದ ದುರ್ಭಿಕ್ಷದ ದೆಸೆಯಿಂದ ಆವಶ್ಯಕವಾಗಿಯೂ, ಇದ್ದಂತೆ ಅವ[illegible]ಗೆ ಸಲಹೇ ಕೊಟ್ಟಹಾಗೆ ಹೇಳಲ್ಪಡುತ್ತದೆ.

5. ಈ ಪ್ರಯತ್ನವು ಕೂಡ್ಲೆ ನೆರವೇರಿಸಲ್ಪಟ್ಟಿತು. ಮತ್ತು ನಡೆದ ಕಾಮಗಾರಿಯು ಸ್ವಲ್ಪಮಟ್ಟಿಗೆ [illegible]ದರ ಜಾಡೆಯಿಂದ ಕಂಡು ಹಿಡಿಯಬಹುದು. ಆದರೆ ಅದಕ್ಕೆ ಸಮ್ಮಂಧಪಟ್ಟ ಎಲ್ಲಾ ಲೆಖ್ಖಗಳೂ ದಸ್ತಾವೇಜುಗಳೂ ಅರಮನೆಯ ಹಳೇ ರಿಕಾರ್ಡುಗಳೊಂದಿಗೆ ನಾಶಮಾಡಲ್ಪಟ್ಟ ಅಂಶವು ವಿಷಾದಕರವಾಗಿದೆ.

6. ಸನ್ 1801ನೇ ಇಸವಿಯಲ್ಲಿ ಈ ಪ್ರದೇಶವು ಮೇಸ್ತ್ರಿಗಳಿಂದ *ಚನ್ನಾಗಿ ಪರಿಶೋಧನೆ ಮಾಡಲ್ಪಟ್ಟು ಅವರುಗಳು ತಿಪ್ಪೂರು ಅಣಕಟ್ಟೆಯಿಂದ ನೀರು ತರತಕ್ಕ ವಿಷಯದಲ್ಲಿ ಅನುಕೂಲವಾದ ರಿಪೋರ್ಟು ಮಾಡಿದ್ದರು. ಇದಲ್ಲದೆ ಸಾಗರ ಕಟ್ಟೆ (ಯೆಂಬ ಸ್ಥಳದಲ್ಲಿ) ಹೊಸದಾದ ಅಣಕಟ್ಟೆ ಕಟ್ಟುವ ವಿಷಯವನ್ನು ಸಹ ಸಲಹಾ ಕೊಟ್ಟಂತೆ ಕಾಣುತ್ತದೆ: ಯಾಕಂದರೆ, ಸದರೀ ವಿಷಯವ[illegible]ನ್ನು ಆಲೋಚಿಸುವದಕ್ಕೋಸ್ಕರ ಆಗ್ಯೆ, ರೆಸೀಡೆಂಟರವರೂ, ಪೂರ್ಣಯ್ಯನವರೂ, ಆ ಸ್ಥಳಕ್ಕೆ ಪ್ರಯಾಣ[illegible]ಮಾಡಿದರು. ಆದರೆ ಮೇಸ್ತ್ರಿಗಳು ಅಣಕಟ್ಟೆಗಿಂತಲೂ ಸದರೀ ಹೊಸಕಟ್ಟೆ ಅನುಕೂಲವಾದ್ದೆಂದು ಅಭಿಪ್ರಾ[illegible]ಮ ಕೊಟ್ಟದ್ದಾಗಿ ಕೆಲವರು ಊಹಿಸುತ್ತಾರೆ. ಪರಂತು ಇದು ಸಂದೇಹಾಸ್ಪದವಾಗಿರುತ್ತದೆ. ಆಕಾಲದಲ್ಲಿಯೇ [illegible]ಹಾಜರಿದ್ದ ಜನಗಳು ನನಗೆ ತಿಳಿಸಿ ಇರುವ ಅಂಶಗಳಿಂದ ತೋರುವದೇನಂದರೆ (ಕೋಲ್‌ಸಾಹೇಬರ ತೋಟದ

*1 ಗೋವಿಂದಯ್ಯ.
2 ನಾಯಕ ಕೃಷ್ಣಯ್ಯ.
3 ದಾದೇರಾವು.
4 ಕಾಳಾಚಾರಿ.

ಬಳಿಯಿರುವ ಮುಖ್ಯವಾದ ನಾಲೆಯಿಂದ ತೆಗಿಯಿಲ್ಪಟ್ಟಂಥ ಮತ್ತು ಮೆ॥ ಕೋಹಾರ್ ಯೆಂಬವರ ನಕ್ಷೆಯಲ್ಲಿ ಯೆರೆಂಗೆರೆ ನಾಲಾಯೆಂಬ ಹೆಸರುಳ್ಳಂಥಾ ಕೇಸೆರಾಯಿ ಗ್ರಾಮದ ವರಿವಿಗೆ ವಿಸ್ತರಿಸಿದ ನಾಲೆಯ ಮೋಜಣಿಯೂ ಮಟ್ಟವೂ ತ್ರಿಕಡಿ ಮೂಲವಾಗಿ ಜಾಗರೂಕತೆಯಿಂದ ಮಾಡಲ್ಪಟ್ಟವು. ಮತ್ತು ಕಾಮಗಾರಿಯು ವಿಶೇಷ ಬಲವಾಗಿಯೂ ಸ್ಥೈರ್ಯದಿಂದಲೂ ನಡಿಸಲ್ಪಟ್ಟಂತೆ ಸ್ಪಷ್ಟವಾಗಿ ಕಾಣುತ್ತದೆ. ಇದಕ್ಕೆ ಪ್ರಾಯಶಃ ಕೆಲವು ವರ್ಷಗಳ ವರಿಗೆ ಏಕಪ್ರಕಾರವಾಗಿ ಮಳೇ ಇಲ್ಲದೆ ಹೋದದ್ದೇ ಕಾರಣವಾಗಿರಬಹುದು. ಯಾತಕ್ಕಂದರೆ ಮಳೇ ಬರಬೇಕೆಂಬ ಕೋರಿಕೆಯಿಂಧ ಚಾಮುಂಡೀ ಮುಂತಾದ ದೇವತೆಗಳಿಗೆ ಶಾಂತಿ ಕರ್ಮಗಳನ್ನು ಮಾಡಿಸುವದಕ್ಕೋಸ್ಕರ ಬಹಳ ಹಣ ಆ ಕಾಲದಲ್ಲಿ ವೆಚ್ಚವಾದಂತೆ ಕಾಣಬರುತ್ತದೆ.

7. ಕಾಲ್ವೆ ಬರತಕ್ಕ ಮಾರ್ಗವು ತುಕಡಿಯೆಂಬ 19 ಅಥವಾ 20 ವಿಭಾಗಗಳು ಮಾಡಿ ಅವುಗಳಿಗೆ ದಫೇದಾರರೂ ಇತರ ತಾಬೇದಾರರೂ ಕೈಕೆಳಗೆ ಉಳ್ಳ ತುಕಡೀದಾರರನ್ನೇ ನೇಮಿಸಿ ಮತ್ತು ಮೇಸ್ತ್ರಿಗಳ ಕೈಕೆಳಗೆ ಲೆಕ್ಕಗಳಿಗಾಗಿ ಮುತ್ಸದ್ದೀಗಳ ನಿಟ್ಟು ಬಟ್ಟು ಮೇಲ್ವಿಚಾರಣೇಯನ್ನು ಬಕ್ಷಿ ತಿಪ್ಪಯ್ಯನವರಿಗೆ

1. ಕಿಧರ್‌ಬೇಗ್ ರಾಮರಾವ್.
2. ಕಮಾಲ್‌ಖಾ.
3. ಬುರ್ಡಖಾ.
4. ಪಾಪಯ್ಯ.
5. ಭುಜಂಗರಾವ್.
6. ಶ್ರೀನಿವಾಸರಾವ್.
7. ಮಹಮ್ಮದ್ ಷಹಾಬಾದ್.
8. ಷಿಯಾದಾವುದ್.
9. ನಿಜಾಮುದ್ದೀನ್.
10. ಇಮಾಂಖಾ.
11. ಅಬ್ದುಲ್‌ಖಾದರ್.
12. ಮೀರ್‌ಮಜಾ.
13. ಸಿತಾಬ್‌ಖಾ.
14. ಗುಲಾಂ ಅಲ್ಲಿ.
15. ನರಸಪ್ಪ ನಾಯಕ್.
16. ಸೈಯದ್ ಹೈದ್ರ್.
17. ಮೀರ್ ಗುಲಾಂ ಹುಸೇನ್.
18. ಮೈಸೂರು ರಾಮರಾವ್.
19. ಹುಚ್ಚಗಿರಿ.

ವಪ್ಪಿಸಿದರು. ಇವರ ಮೊಮ್ಮಕ್ಕಳಿಂದಲೇ ಈ ಕಾಮಗಾರಿಗೆ ಸಮ್ಮಂಧಪಟ್ಟ ಕೆಲವು ಲಿಖಿಪತ್ರಗಳನ್ನು ನಾನು ಸಂಪಾದಿಸಿ ಇದ್ದೇನೆ.

8. ಒಂದು ತುಕಡಿಗೆ ಶೇರಿದ ಬಟ್ಟು ಶಿಬ್ಬಂದಿ 1000 ಮಂದಿಯಾಗಿದ್ದರು, ಪರಂತು ಸಾವಿರದಿಂದ 500 ಮಂದಿ ವಳಗೆ ಹೆಚ್ಚು ಕಡಮೆಯಾಗಿತ್ತು. ಸಂಪಾದಿಸುವದಕ್ಕೆ ನನಗೆ ಶಕ್ಯವಾದ ತಪಶೀಲ್‌ವಾರ್ ಲೆಕ್ಕವು 1809ನೇ ಇಸವಿ ಜುಲೈ ತಿಂಗಳಲ್ಲಿ ನಾಲ್ಕು ದಿನಗಳೊಳಗೆ ಇದ್ದ ಶಿಬ್ಬಂದಿಯನ್ನು ಕುರಿತದ್ದಾಗಿ ಮಾತ್ರವಿರುತ್ತದೆ. ಈ ತಪಶೀಲ್‌ನಲ್ಲಿ ಮೈಸೂರು ಸಮೀಪದ ತುಕಡೀಗಳು ಮಾತ್ರ ಅಡಗಿರುವಂತೆ ನೆನೆಸಲ್ಪಟ್ಟಿದೆ, ಇದು ಹ್ಯಾಗಂದರೆ.

ಕಾರೇಗಾರ್ರ ವಿವರ.	ಶುಕ್ಲ ಸಂ॥ ನಿಜಆಶ್ವಯುಜ ಶುದ್ಧ.			
	12	13	14	15
ಚೆಂಗೂಲೀಯುವರು	3391	5486	5486	5608
ಕಾಮಾಟೀಗಳು	2667	2886	2394	2394
ಕಮ್ಮಾರರು	74	59	59	59
ಸುರಂಗದವರು	38	38	38	38
ಕಲ್ಲುವಡೆಯುವವರು	147	131	131	131
ಮೇಸ್ತ್ರೀಗಳು	7	7	7	7
ಗಾರೇಕೆಲಸದವರು	4	4	4	4
ಮುತ್ಸದಿಗಳು	143	143	143	143
ಖಾಲೀ ಹಾಕ್ಜನಗಳು	470	400	400	400
ಪಕಾಲೀ ಯವರು	200	200	200	200
ಕಲಾಸೀ ಯವರು	300	480	480	48[illegible]
ಖುಲ್....	7341	9234	9342	9[illegible]

9. ದರೋಬಸ್ತು ಜಾತಿಯ ಶಿಬ್ಬಂದೀಗೂ ಸಲ್ಲುತಿದ್ದ ತಲಬಿನ ದರಗಳು ತಿಳಿದಿರುವದಿಲ್ಲ, ಪರಂತು ಮುತ್ಸದ್ದೀಗಳಿಗೆ ಮಾಹೇ ಯಾನಾ 14 ರೂಪಾಯಿಗಳು ಸಲ್ಲುತಿದ್ದವು. ಗಂಡುಕೂಲೀ ಯವರಿಗೆ 2 ಆಣೆ 4 ಪೈ, ಹೆಂಣುಕೂಲೀ ಯವರಿಗೆ 1 ಆಣೆ 2 ಪೈ, ಸಲ್ಲುತ್ತಿತ್ತು. ಈ ದರಗಳು ಪ್ರಾಯಶಃ ಉಹಿಸ ಬಹುದಾದ್ದಕ್ಕಿಂತ ಬಹಳ ಹೆಚ್ಚಾಗಿರುತ್ತದೆ.

10. ಬಂಡೇ ಒಡೆಯುವದರ ಲಾಗವಡು ಬಹಳ ಹೆಚ್ಚಾಗಿ ಇದ್ದಿರಬೇಕು—ಯಾಕಂದರೆ, ಪೂರ್ವ ಖರ್ಚಾಗಿರುವದು ಶಿವಾಯಿ, ಕಾಮಗಾರೀ ನಡೆದಿರುವ, ಕಡೇ ಯೆರಡು ವರ್ಷಗಳಲ್ಲಿ ಮದರಾಸ್ ಗವರ್ನಮೆಂಟಿನಿಂದ 150000 ಪೌಂಗಳ ಬಾರೂದ್ ಖರೀದಿ ಮಾಡಲ್ಪಟ್ಟಿತು.

11. 1805ನೇ ಇಸವಿ ಜನವರೀ ಮಾಹೇ ಯೊಳಗೆ ಕರ್ನಲ್ ಮೆಕ್ಕಂಜೀಯವರು, ತಿಪ್ಪೂರು ಅಣೆಕಟ್ಟೆ ಯಿಂದ ಹೋಗುವ ಕಾಲ್ವೆಯಲ್ಲಿ ಆಗ್ಯೆ ಕೊನೆವರಿಗೆ ನೀರು ಹರಿಯಲಿಲ್ಲ ವೆಂತಲೂ, ಪರಂತು ಅದು ಅಗಿಯಿಸಲ್ಪಡುತಿದ್ದಂತೆಯೂ, ಷರಾ ಮಾಡಿದರು, ಮತ್ತು 1807ನೇ ಮಾರ್ಚಿ ಮಾಹೇ ಯಲ್ಲಿ ಬಳಸಿ ತೆಗದು ಕ್ಕೊಂಡು ಹೋಗಲ್ಪಟ್ಟಂತೆ ನಮೂದಿಸುತ್ತಾರೆ. ಕಾವೇರೀ ಲಕ್ಷ್ಮಣ ತೀರ್ಥ ಯೀವುಭಯ ನದಿಗಳ ಸಂಗಮದ ವಿಶೇಷಕ್ಕೋಸ್ಕರ ನಡೆದ ಪೂಜಾದಿಗಳಿಗೂ, ಸದರೀ ಅಣೆಕಟ್ಟೆಯನ್ನು ನೋಡುವದಕ್ಕಾಗಿ ಬಂದಿದ್ದ ಪೂರ್ವದ ಮಹಾರಾಜರವರಿಗೆ ಸರಬರಾಯಿ ಮಾಡಿದಬಗ್ಗ್ಯೆ ಸಾಗರಕಟ್ಟೆಯಲ್ಲಿ ಅದೇ ಇಸಿವೀ ಜನವರೀ ತಿಂಗಳೊಳಗೆ ಖರ್ಚು ನಡೆದಂತೆ ಲೆಕ್ಕಗಳಿಂದ ತಿಳಿಯಬರುತ್ತೆ. ಮತ್ತು 1807—8ನೇ ಇಸಿವೀ ಲಾಗಾಯಿತು ಈ ನಾಲೆಯು ತಾಲ್ಲೂಕ್ ಲೆಕ್ಕಗಳಲ್ಲಿ ಹೊಸಬಾಬಾಗಿ ದಾಖಲಾಗಿದೆ.

12. ಲಕ್ಷ್ಮಣ ತೀರ್ಥಕ್ಕ್ಯೂ ಮೈಸೂರಿಗೂ ಮಧ್ಯೆ ಕಾಲ್ವೆಯ ಒಟ್ಟು ಕಾಮಗಾರೀ ನಡೆಯುವದರ ಲೆಕ್ಕಗಳನ್ನು ಸಂಪಾದಿಸ ಲಾರದೆ ಹೋದೆನು. ಯಾಕಂದರೆ ಅನಾವಶ್ಯಗಳಾದ ಜುಜುವೀ ತಪಶೀಲ್‌ಗಳನ್ನು ಕುರಿತ ಖತಾಯತೀಗಳು ಅಡಗಿರತಕ್ಕ ಕೆಲವು ಮಾತ್ರವೇ ಉಳಿದಿವೆ.

13. 1810ನೇ ಇಸಿವೀ ನವಂಬರ್ ಮಾಹೇ ಯಲ್ಲಿ ಪೂರ್ಣಯ್ಯನವರು ಸರ್ಕ್ಯೂಟ್ ಮೇಲೆ ಹೋಗಿ ನರಸೀಪುರದ ಸಮೀಪದಲ್ಲಿದ್ದಾಗ ಮೈಸೂರಿಗೆ ವಾಪಸ್ ಕರೆಯಿಸಿಕೊಳ್ಳಲ್ಪಟ್ಟು ಅವರ ಅಧಿಕಾರವು ಎಕಾಏಕ್ ತಪ್ಪಿಹೋಯಿತು. ಆ ಮೇಲೆಯೂ ಕೆಲವು ಕಾಮಗಾರಿ ನಡೆಯುತಿದ್ದಂತೆ ಲೆಕ್ಕಗಳಿಂದ ತಿಳಿಯ ಬಂದಾಗ್ಯೂ ರಾಜರವರ ಹುಕ್ಕುಂ ನಿಂದ ಕ್ಷಿಪ್ರದಲ್ಲಿ ನಿಲ್ಲಿಸಲ್ಪಟ್ಟಿತು.

14. ಆವರಿವಿಗೆ ಎಷ್ಟು ಕಾಮಗಾರೀ ನಡೆಸಲ್ಪಟ್ಟಿತೋ ಅದನ್ನು ವ್ಯಕ್ತ ಪಡಿಸುವದಕ್ಕೆ ಸದರೀ ಕಾಮಗಾರೀಯನ್ನು ನಿಲ್ಲಿಸಕೂಡದೆಂತಲೂ, ಕಾಲ್ವೆಯನ್ನು ಪೂರೈಸುವದು ಆವಶ್ಯಕವೆಂತಲೂ ಪ್ರಾರ್ಥಿಸಿ ತಿಪ್ಪಯ್ಯನವರು ಈ ಕೆಳಗೆ ಕಂಡ ಮಾತುಗಳಿಂದ ಬರದುಕ್ಕೊಂಡ ಬಿನ್ನಹದೊಡನೆ ರಾಜರವರಿಗೆ ಕಳುಹಿಸಲ್ಪಟ್ಟ ತಖ್ತೆ ಒಂದು ಮಾತ್ರವೇ ಈಗ ಇರತಕ್ಕ ರಿಕಾರ್ಡಾಗಿದೆ.

“ಎಂಟು ಹತ್ತುಲಕ್ಷ ವರಹಾಗಳ ಲಾಗವಡಿನಿಂದ ಕಾವೇರಿಯ ನೀರು ಮೈಸೂರು ಕೋಟೆಯ ಬಾಗಿಲವರಿಗೆ ತರಲ್ಪಟ್ಟಿರುತೆಂದು ಮಹಾ ಸ್ವಾಮಿಗಳಿಗೆ ವೇದ್ಯವೇ ಇದೆಯಷ್ಟೆ, ಇದು ಪಟ್ಟಣದ ಕೋಟೆ ಬಾಗಿಲ ಬಳಿಯಲ್ಲೇ ನಿಲ್ಲತಕ್ಕದ್ದಲ್ಲವಾಗಿ ಕಾಲ್ವೆಯನ್ನು ದಳವಾಯಿಕೆರೆ, ಯೆಣ್ಣೇಹೊಳೆ ಈ ಕಡೆಗಾಗಿ ಒಡಾಯಿಸುವ ಬಗ್ಗ್ಯೆ ಅಪ್ಪಣೇ ಆಗಬೇಕೆಂದು ಪ್ರಾರ್ಥಿಸುತ್ತೇನೆ, ಇದು ಇಂಗ್ಲಂಡಿನಲ್ಲಿ ಸಹ ಪ್ರಸಿದ್ಧಿಯನ್ನು ಹೊಂದಿ ಸೂರ್ಯಚಂದ್ರಾದಿಗಳಿರುವ ಪರ್ಯಂತ ಸ್ಥಾಯಿಯಾಗಿರತಕ್ಕ ಪಟ್ಟಣಕ್ಕೆ ಶೇರಿ ಇರುವ ಕಾಲುವೆಯಾಗಿರುತ್ತದೆ, ಇದ್ದ ಸ್ಥಿತಿಯನ್ನು ಮಹಾಸ್ವಾಮಿಗಳ ಪರಾಮರಿಕೆ ಬಗ್ಗ್ಯೆ ಬಿನ್ನಯಿಸಿ ಇರುತ್ತೇನೆ, ಈ ವಿಷಯದಲ್ಲಿ ಯೇನು ಹೇಳಬಹುದಾದಾಗ್ಯೂ ನ್ನೇನೂ ಹೆಚ್ಚಾಗಿ ಖ್ಯಾತಪಡಿಸಲಿಕ್ಕೆ ನಾನು ಅಸಮರ್ಥನಾಗಿದ್ದೇನೆ, ಪರಂತು ಧರ್ಮಾರ್ಥವಾಗಿಯೂ, ಯಶಸ್ಸಿಸ್ಕರವೂ, ಮಹಾ ಸ್ವಾಮಿಗಳು ಅಪ್ಪಣೆ ಕೊಡಿಸಬೇಕೆಂದು ಪ್ರಾರ್ಥಿಸುತ್ತೇನೆ.”

496

15. ಸರ್ 1811ನೇ ಇಸಿವೀ ವೈಶಾಖ ಮಾಸ ಪೌಷ್ಯದ ತಾರೀಖು ಉಳ್ಳ ಸದರೀ ತಖ್ತೆಯಲ್ಲಿ ನಮೂದಿ ರುವ ತಪಶೀಲ್ ಏನಂದರೆ, ತಿಪ್ಪೂರಿಂದ ಮೈಸೂರುವರಿಗೆ ಸದರೀ ಕಾಲ್ವೆಯ ವಿಶಿಷ್ಟ ಫಾಸಲೆಯೂ 130,001½ಗಜ ಗಳು, ಈ ಪೈಕಿ 128,200 ಗಜಗಳ ಫಾಸಲೇ ನೀರು ಹರಿದಿತ್ತು, ಬಾಕೀ ತಿಳಿಸಲ್ಪಟ್ಟ ತಪಶೀಲ್ ಮೇರೆ 1801½ ಗಜಗಳ ಫಾಸಲೆ ಅಗಿಯಬೇಕಾಗಿತ್ತು. ಹ್ಯಾಗಂದರೆ.

68	ಗಜಗಳು,	ಜರೂರಾದ ಮಟ್ಟಕ್ಕೆ	ಬರಲಿಕ್ಕೆ	½	ಗಜ ಆಳ	ಅಗಿಯಲ್ಪಡಬೇಕಾಗಿತ್ತು.
102	,,	,,	,,	1	,,	,,
466	,,	,,	,,	1¾	,,	,,
300	,,	,,	,,	2	,,	,,
137	,,	,,	,,	2½	,,	,,
314½	,,	,,	,,	3	,,	,,
281½	,,	,,	,,	4	,,	,,
90	,,	,,	,,	5	,,	,,
42½	,,	,,	,,	6	,,	,,
ಜುಮ್ಲಾ 1801½						

16. ಕೇಸರಾಯಿ ಕಾಲ್ವೆಯ ಫಾಸಲೆ 30,000 ಗಜಗಳೆಂತಲೂ, ಆ ಪೈಕಿ 20,000 ಗಜಗಳ ಫಾಸಲೆ ನೀ ರು ಹರಿದಿದ್ದ ಹಾಗೂ ತಿಳಿಸಲ್ಪಟ್ಟಿತು, ಮುಖ್ಯ ಕಾಲ್ವೆಯಲ್ಲಿ ಯಾವ ಪರ್ಯಂತ ನೀರು ಬಂತೋ ಅಂತಾ ಗೊತ್ತಾದ ಸ್ಥಾನವನ್ನು ತೋರಿಸಲಿಕ್ಕೆ ತಪಶೀಲ್‌ವಾರ್ ಮೋಜಣಿಗಳು ಸಾಕಾದಷ್ಟು ಸ್ಪಷ್ಟವಾಗಿರುವದಿಲ್ಲವು. ಆದರೆ ಸಾ ಯರೆಕಟ್ಟೆ ಶೇತುವೆಯನ್ನು ಕುರಿತು ನಮೂದ್ ಇರುತ್ತೆ. ಈ ಶೇತುವೆಯು, ಮೈಸೂರಿಗೆ ಹೋಗುವ 1ನೇ B. M. ರಸ್ತೆಯ ಬಾಬತು ಮಿಸ್ಟರ್ ಕೊಹ್ಲಾಯವರ ನಕ್ಷೆಯಲ್ಲಿ 43 ವ 44 ನೇ ಮೈಲುಗಳ ಮಧ್ಯೆ ಕಾಣಿಸಲ್ಪಟ್ಟ ದಾಗಿ ನಂಬಲ್ಪಟ್ಟಿರುವದಲ್ಲದೆ ಮೈಸೂರಿಂದ ಇಲವಾಲಕ್ಕೆ ಹೋಗುವ ಹಳೇ ರಸ್ತೆಯಲ್ಲಿ ಇರುವ ಒಂದು ಸಂಣ ಶೇತುವೆ ಎಂದು ನಂಬ ಬಹುದಾಗಿದೆ.

17. ಅಲ್ಲಿಂದ ಷುಮಾರ್ 30 ಯಾ 40 ಗಜಗಳ ಈಚೆ "ಜೋಡು ತೆಂಗಿನ ಮರಗಳೆಂಬ" ಯೆರಡು ತೆಂ ಗಿನ ಮರಗಳಿದ್ದವು, ಇವುಗಳು, ಕಾವೇರೀ ನೀರಲ್ಲಿ ಮೈಸೂರು ಪ್ರಜೆಗಳು ಸ್ನಾನ ಮಾಡುತ್ತಿದ್ದ ಸ್ಥಳದ ಗು ರುತಾಗಿದ್ದಂತೆ ಅರ್ಜಿಗಳಲ್ಲಿ ಬಾರ್‌ಬಾರ್ ನಮೂದಿಸಲ್ಪಟ್ಟಿರುತ್ತೆ.

18. ಕೋಟೇಬಾಗಿಲ ಬಳಗೆ ನೀರು ತರಲ್ಪಟ್ಟದ್ದಾಗಿ ತಿಪ್ಪಯ್ಯನವರು ನಮೂದಿಸುತ್ತಾರೆ. ಆತನು ತಾತ್ಪರ್ಯಪಟ್ಟ ಕೋಟೇಬಾಗಿಲೆಂಬದು ಈಗಿನ ಕೋಟೇಬಾಗಿಲುಗಳ ಪೈಕಿ ಯಾವದೂ ಅಲ್ಲ. ಪರಂತು ಸಾಯ ರ್ ಕಟ್ಟೇ ಶೇತುವೆಗೂ ರಾಜಪೂತ್ ಘಾಟೀಗೂ ಮಧ್ಯೆ ಮೈಸೂರಿನ ಪೂರ್ವದ ಕೋಟೆಗೆ ಶೇರಿದ ಒಂದು ಹಳೇ ಬಾಗಿಲೆಂಬದಾಗಿ ನನಗೆ ವಿವರ ತಿಳಿಸಲ್ಪಟ್ಟಿದೆ. ಅದರ ಬಳಿ ಕರಿಕಲ್ ಮಾರುತಿಯೆಂಬ ಒಂದು ಬಂಡೆ ಇದೆ. ಶೇತು ವೆ ಮೊದಲು ಸದರೀ ಸ್ಥಳದವರಿಗೆ ಪ್ರವಾಹ ಬಹಳ ಕೊಂಚವಾದಾಗ್ಯೂ ಅದುವರಿಗೆ ನೀರು ಹರಿದಂತೆ ದೃಢವಾಗಿ ತಿಳಿಸಲ್ಪಟ್ಟಿದೆ.

19. ಸದರೀ ಶೇತುವೆಕೆಳಗಿನ ಕಾಲ್ವೆಯು ಈಗ ಪ್ರಾಯಶಃ ಕರ್ಮಾ ಏಳುವ ಸ್ಥಾನ ಭರ್ತಿಯಾಗಿ ಹೋಗಿಯಿದೆ. ಈ ಕಾಲ್ವೆಯೂ ಬಹಳ ವೇಗವಾಗಿ ಹರಿಯುವದರಿಂದ ಈಗ ಕೆಳಗೆ ಅಗಸರು ಅಸ್ಥಳದಲ್ಲಿ ರಾಜಪೂತ್ ಘಾಟೀಯಿಂದ ಊರುವ ನೀರಿನಿಂದ 6 ಅಡಿ ಆಳಕ್ಕೆ ಮಾಡಿಕ್ಕೊಂಡು ಅದರಲ್ಲಿ ಒಗೆಯುತ್ತಿದ್ದರು. ಈಗ ಆ ಮೇರೆ ಒಗೆಯುವದು ಅವರಿಗೆ

20. ನಾನು ಇಲ್ಲಿ ತೋರಿಸಬೇಕಾದ ಸಂಗತಿ ಏನಂದರೆ ಸದರೀ ಕಾಲ್ವೆ ತೆಗಿಸ ಟ್ಟ ಕೆರೆಗೆ ತರುವ ಉದ್ದೇಶ ವೇನಾದರೂ ಇತ್ತೆಂದು ತ್ತೋರಿಸಲಿಕ್ಕೆ ರಿಕಾರ್ಡ ನಾಖ

ಗಿ ಜನಗಳ ಹೇಳಿಕೆಯೂ ಯಾವದೂ ಇಲ್ಲ. ಕಾಲ್ವೆಯ ಯಾವ ಮಟ್ಟಗಳಿಗೆ ಸದರೀ ಕೆರೆಯ ಕೋಡಿಯು ಪ್ರಮಾಣ
ವಾಗಿ ತೆಗೆದುಕ್ಕೊಳ್ಳಲ್ಪಟ್ಟಿರುತ್ತೋ ಅಂತಾ ಮಟ್ಟಗಳಿಂದ ಪಡೆದ ಅಭಿಪ್ರಾಯಗಳು ಈ ವಿಷಯದ ಸಾಧ್ಯತೆಯನ್ನು
ವ್ಯಕ್ತ ಪಡಿಸಿದ್ದರಿಂದ ಯೆಷ್ಟರ ಉಪಯುಕ್ತಗಳಾದಾಗ್ಯೂ ಯಾವ ಪರಿಯಂತ ನೀರು ಹರಿದದ್ದಾಗಿ ಹೇಳಲ್ಪ
ಡುತ್ತೋ ಆಸ್ಥಾನಕ್ಕೆ ನೀರು ಹರಿಯಿತೆ ಇಲ್ಲವೆ ಯೆಂಬ ಅಂಶಕ್ಕೆ ಆ ಅಭಿಪ್ರಾಯಗಳು ಉಗಾವಾಗುವದಿಲ್ಲ.

21. ಇಂತಾ ತಾತ್ಪರ್ಯಗಳುಂಟಾಗಿದ್ದಂತೆಯೂ ...ಡು ಹಿಡಿಯಲ್ಪಟ್ಟ ಮಟ್ಟಗಳ ದೆಸೆಯಿಂದ ಅದು
ಅಸಾಧ್ಯವಾಗಿ ಕಾಣಬಂದಲು ಆ ತಾತ್ಪರ್ಯಗಳು ನಿವ್ವ ...ಳಾನಂತೆಯೂ, ನನಗೆ ತಿಳಿಸಲ್ಪಟ್ಟಿತು. ಇದು
ಯೆಷ್ಟರಮಟ್ಟಿಗೆ ನಿಜವೋ ನಾನು ಹೇಳಲಾರೆನು, ಆದರೆ ಇದು ಉದ್ದೇಶಿಸಲ್ಪಟ್ಟಿಂತೆ ಕರ್ನಲ್ ವಿಲ್ಕಿಸ್ ಯಾವ
ರಾಗಲಿ, ಇತರರು ಯಾರಾಗಲಿ ನಿಶ್ಚಯವಾಗಿ ಹೇಳಲಿಲ್ಲವು. ದಳವಾಯಿ ಕೆರೆಗೆ ಷಹರಿನ ಮೇಲೆ ಹರಿಯುವ ನೀರ
ನ್ನು ತರಿಸುವದಕ್ಕೂ ಕೋಟೇಯೊಳಗೆ ಮುಖ್ಯವಾಗಿ ವರಾಹಸ್ವಾಮಿ ದೇವಸ್ಥಾನದ ಉಪಯೋಗಕ್ಕೋಸ್ಕರ
ನೀರು ತರಬಹುದಾದ ವರಾಹತೀರ್ಥವೆಂಬ ಬಂದು ಕುಂಟೇಯನ್ನು ದೊಡ್ಡಕೆರೆಗೂ ಕೋಟೆಗೂ ಮತ್ತೆ ಪೂ
ರ್ವದಿಕ್ಕಿನ ಅಗಳ್ತಿಯಲ್ಲಿ ಮಾಡುವದಕ್ಕೂ ನಾಲೆಯನ್ನು ಮಾಡುವ ಉದ್ದೇಶ್ಯವಾಗಿತ್ತೆಂದು ಮೈಸೂರಲ್ಲಿ ವಿಶೇಷ
ವಾಗಿ ಅನೇಕರು ನಂಬುತ್ತಾರೆ. ಉಪಯೋಗಕ್ಕೋಸ್ಕರ ಕೋಟೆಯೊಳಗೆ ನೀರು ತರಬಹುದಾಗಿತ್ತು.

22. ಆದ್ದರಿಂದ ಕ್ರಮವಾಗಿ ಯರಡು ಸಂವತ್ಸರಗಳಲ್ಲಿ ತೆಂಗಿನ ಮರಗಳವರಿಗೆ ನೀರುಬಂತೆಂಬ ಜನಗ
ಳ ನಂಬಿಕೆ ವಾಸ್ತವ್ಯವೋ ಇಲ್ಲವೋ ಯೆಂಬದು ವಿಚಾರಿಸತಕ್ಕ ಮುಖ್ಯ ಅಂಶವಾಗಿ ಇದೆ. ಸದರೀ ಯರಡು ವ
ರುಷಗಳೊಳಗೆ ಕೋಟೆಯಲ್ಲಿ ವರಾಹಸ್ವಾಮಿಯ ಅಭಿಷೇಕಾದಿಗಳಿಗಾಗಿ ನೀರು ಕ್ರಮವಾಗಿ ಉಪಯೋಗಿಸಲ್ಪ
ಟ್ಟಿತೆಂಬ ಸಂಗತಿಗಿಂತಲೂ ಸದರೀ ನಂಬಿಕೆಯ ಪ್ರಾಮಾಣಿಕತೆಗೆ ಬಲವಾದ ಬೇರೆ ದೃಷ್ಟಾಂತಗಳನ್ನು ಕೊಡುವದ
ಕ್ಕೆ ಆಗಲಾರದು.

23. ಚೀಫ್ ಇಂಜನಿಯರವರು ಮೈಸೂರುವರಿಗೆ ಕಾಲ್ವೆಯಲ್ಲಿ ನೀರು ಬಂದಿರಬಹುದೆಂದು ಅಂಗೀ ಕರಿ
ಸಿದಾಗ್ಯೂ ಇದು ಕಾವೇರೀ ನೀರಾಗಿರಲಾರದೆಂತಲೂ, ಪರಂತು ಮೇಲಿನ ಜಮೀನುಗಳಿಂದ ಹರಿದ ನೀರಾಗಿರಬೇ
ಕೆಂತಲೂ ಯೆಣಿಸುತ್ತಾರೆ ಮತ್ತು ಯಿದಕ್ಕೆ ದೃಷ್ಟಾಂತವಾಗಿ ಲಕ್ಷ್ಮಣತೀರ್ಥ ಅಣೆಕಟ್ಟೆಯಿಂದ ಅಳೆಯಲ್ಪಟ್ಟ
21ನೇ ಮೈಲ್ ಲಾಗಾಯತು 30ನೇ ಮೈಲವರಿಗೆ ಯಿರುವ ಕಾಲ್ವೆಯ ಭಾಗದಿಂದ ಉಂಟಾದ ನಿದರ್ಶನಗಳನ್ನು
ತಿಳಿಸುತ್ತಾರೆ, 28ನೇ ವ 29ನೇ ಮೈಲಗಳ ಮಧ್ಯದಲ್ಲಿ, ಅಂದರೆ ಬೆಳಗೊಳದ ಬಂಗಲೇ ಮೇಲ್ಗಡೆ ಯಿರುವ ಗುಟ್ಟ
ದ ಮಾರ್ಗವಾಗಿ ತೆಗೆಯಲ್ಪಟ್ಟ ಕಾಲ್ವೆಯಲ್ಲಿ ಪೂರ್ಣಯ್ಯನವರ ನಾಲೆಯ ತಳವೆಲ್ಲ ಬಂಡೆಯಾಗಿದೆ. ಆದದರಿಂದ
ಕಾಲ್ವೆಯ ತಳವು ಈಗಲಿರುವದಕ್ಕಿಂತ ನಿಜವಾಗಿ ಯಾವಾಗಲೂ ತಗ್ಗಾಗಿ ಯಿರಲಿಲ್ಲವಾದ್ದರಿಂದಲೂ, ಮಟ್ಟವು
21ನೇ ಮೈಲಿನಲ್ಲಿರುವದಕ್ಕಿಂತ 9 ಅಡಿಗಳ ಎತ್ತರ ಯಿರುವಂತೆ ಕಾಣಬಂದದರಿಂದ ಕಾಲ್ವೆಯ ಈ ಭಾಗದಲ್ಲಿ ಹ
ರಿದ ನೀರು ಮೈಸೂರಕಡೆ ಹರಿಯುವದಕ್ಕೆ ಬದಲಾಗಿ ಲಕ್ಷ್ಮಣ ತೀರ್ಥಕ್ಕೆ ವಾಪಸ ಹರಿಯಬೇಕಾಗುತ್ತೆ.

24. ಈ ಕಾರಣದಿಂದಲೂ ಸರ್ 1806ನೇ ಇಸವೀಯೊಳಗೆ, ಆನಂದೂರ್ ಅತರಾಪ್ ಕಾಲ್ವೆಯ ಭಾಗದ
ಲ್ಲಿ ನೌಕರೀ ಇದ್ದ ತುಕಡಿಯ ಮುತ್ಸದ್ದಿಯ ಮಗನು, ತಾನು 1809ನೇ ಇಸವಿಯಲ್ಲಿ ಮೈಸೂರಿಗೆ ಹೋಗಿದ್ದ
ಹಾಗೆ ಜ್ಞಾಪಕವಿದೆಯೆಂತಲೂ ಆಗ ಸಾಯರ್ ಕಟ್ಟೇ ಸೇತುವೆವರಿಗೆ ನೀರು ಬಂದದಕ್ಕಾಗಿ ಮೈಸೂರು ಜನಗಳಿಗೆ
...ಕವುಂಟಾಗಿರಲು, ಬೆಳಗೊಳದ ಬಳಿ ಕಾಲ್ವೆ ತೆಗೆಯುವ ಕೆಲಸ ಪೂರೈಸಿ ಇರಲಿಲ್ಲವಾಗಿ ಅದು
...ಳ ಬಲವಾದ ಮಳೆಯಿಂದ ಹರಿದ ಮೇಲಿನ ನೀರಾಗಿರಬಹುದೆಂದು ತಾನು ಎಣಿಸಿದ್ದಾಗಿಯೂ ನನ
...ದಲೂ ಸಹಾ ಯಿದೇ ತೀರುವಾನವಾದ ಅಭಿಪ್ರಾಯವೆಂದು ಎಣಿಸುವವನಾಗಿ ಯಿದ್ದೆನು,
...ನ್ನು ಅಜಮಾಯಿಷೀ ಮಾಡಿ ಗ್ರಾಮಸ್ಥರನ್ನು ತನಖೀ ಮಾಡಿ ಅವರ ಹೇಳಿಕೆಗೆ ಹಳೇ
...ಡುವಲ್ಲಿ ನನ್ನ ತಾತ್ಪರ್ಯಗಳನ್ನು ಬದಲಾಯಿಸಲಿಕ್ಕೆ ಯುಕ್ತಗಳಾದ ಕಾರಣಗಳು
...ಲೆ ಕಂಡ ಸ್ಥಾನವು, ಅಣೆಕಟ್ಟೆಯಿಂದ 28 ವ 29ನೇ ಮೈಲಗಳ ಮಧ್ಯೆಯಿರು
...ಲ್ಲಿ ಯಿದಕ್ಕೆ "ಅಕರ" ಎಂಬ ಹೆಸರಿನಿಂದ ಗೊತ್ತಾಗಿದೆ. ಆಳವಾದ ಕಾಲ್ವೆ

ಯೆಂದರ್ಥವುಳ್ಳ ಬಂಡೆ ಒಡೆದ ಹೆಚ್ಚಾದ ಆಳವು ಷುಮಾರ್ 64 ಅಡಿಗಳು ಯಿದೆ. ಆ ಯಾಳವಲ್ಲಿ ಮೈಸೂರ ರಾಜಪೂತ್ ವಗೈರೇ ಘಾಟೀಗಳಲ್ಲಿರುವಂತೆ ಅನೇಕ ವಳ್ಳೇ ಜಲೆಗಳಿದ್ದು ಅವುಗಳಲ್ಲಿ ವಿಸ್ತಾರವಾಗಿ ನೀರು ಬರುತ್ತೆ.

25. ಸರ್ 1865ನೇ ಯಿಸವೀಯಲ್ಲಿ ಮೆಸ್ಟರ ಕೋಹರ್ನ್ ಯೆಂಬವರಿಂದ ತಯಾರ್ ಮಾಡಲ್ಪಟ್ಟ ಪೂರ್ಣಯ್ಯನವರ ಕಾಲ್ವೆಯ ಸರ್ವೇದೆಸೆಯಿಂದ ಆಗ್ಯೆ ನೀರಾವರಿಯು 17ನೇ ವ 18ನೇ ಮೈಲುಗಳ ಮಧ್ಯೆ ನಿಂತುಹೋದಂತೆಯೂ ಆದರೆ ತತ್ಪೂರ್ವವೇ ಕೆಪ್ಟನ್ ಜಾನ್‌ಸನ್‌ಯವರು 21ನೇ ಮೈಲಿಗೆ ಆಚೆಗೂ ತೆಗೆದುಕೊಂಡು ಹೋಗಿದ್ದಂತೆಯೂ ತಿಳಿಯಬರುತ್ತೆ. ಹೊಂಗಹಳ್ಳಿ ಗ್ರಾಮದ ಜಮೀನುಗಳು 21ನೇ ಮೈಲಿಗೂ 24ನೇ ಮೈಲಿಗೂ ಮಧ್ಯೆ ಯಿರುವದರಿಂದ ಆ ಗ್ರಾಮದ ರೈತರು ನಾಲೇ ಕೆಳಗಣ ತರೀ ಜಮೀನುಗಳನ್ನು ಸಾಬಕು ಸಾಗುವಳೀ ಮಾಡಿದಂತೆ ತಿಳಿಸುತ್ತಾರೆ. ಕೆಲವರು 15 ವರುಷಗಳ ಹಿಂದಿನವರಿಗೇತಲೂ, ಹೆಚ್ಚು ಸಂಖ್ಯೆಯುಳ್ಳ ಜನರು, ನೀರಿಲ್ಲದ ಸಬಬ್ ಈಚಿಗೆ 40 ಯಾ 45 ವರುಷಗಳಿಂದಲೂ ಸಾಗುವಳೀ ಯಿಲ್ಲವೆಂತಲೂ ಹೇಳುತ್ತಾರೆ.

26. ಕಾಲ್ವೆಯ ನೀರು ಮೈಸೂರುವರಿಗೆ ಸಮಗ್ರವಾಗಿ ಹರಿಯುತ್ತಲಿದ್ದಂತೆ ಯಿವರುಗಳ ಪೈಕಿ * ಒಬ್ಬ ಮುದುಕನಿಗೆ ಜ್ಞಾಪಕವಿರುತ್ತೆ. 26 ವ 36ನೇ ಮೈಲುಗಳ ಮಧ್ಯೆ ಇರುವ ಬೆಳಗೊಳ, ಹೊಸಹಳ್ಳಿ, ನಾಗನಹಳ್ಳಿ, ಲಕ್ಷ್ಮೀಪುರ ಈ ಗ್ರಾಮಗಳೊಳಗೆ ವಾಸಮಾಡುವ ಇತರ ಜನಗಳು † ನೀರು ಬರುತ್ತಿದ್ದ ಮತ್ತು ತಾವು ಕಾಲ್ವೆ ನೀರು ಜಮೀನುಗಳಿಗೆ ಬಿಟ್ಟುಕೊಳ್ಳಲಿಕ್ಕೆ ಉಪಯೋಗಿಸುತ್ತಿದ್ದ ತೂಬುಗಳನ್ನು ತೋರಿಸುವದಲ್ಲದೆ, ಸರ್ಕಾರದ ಬಟಾಯಿ ಧಾನ್ಯವು ಶ್ರೀರಂಗಪಟ್ಟಣದ ಸರ್ಕಾರ್ ಕಣಜಕ್ಕೆ ಸಾಗಿಸಲ್ಪಟ್ಟಂತೆಯೂ ತೋರಿಸುತ್ತಾರೆ. ಮತ್ತು ಒಂದೆರಡು ಸಂಗತಿಗಳಲ್ಲಿ ಪಟ್ಟೆಗಳನ್ನೂ ಲೆಕ್ಕದಾ[illegible]ಗಳನ್ನೂ ತೋರಿಸಿದ್ದ[illegible]ಗ ಅವರ ಹೇಳಿಕೆಗಳು ಸಿ[illegible]ಪಟ್ಟಿರು[illegible]ತ್ತವೆ.

1. * ಚಲುವೇಗೌಡ ಲಿಂಗಣ್ಣ.
1. † ಬೆಳಗೊಳದ ಬೋರ.
2. ಬೆಳಗೊಳದ ನಂಜೇಗೌಡ.
3. ಹೊಸಹಳ್ಳಿ ನಿಂಗೇಗೌಡ.
4. ನಾಗನಹಳ್ಳಿ ಕೆಂಪೇಗೌಡ.
5. „ ತಿಮ್ಮೇಗೌಡ.
6. „ ನಂಜೈಯ.
7. „ ಹುಚ್ಚೇಗೌಡ.
8. „ ಕನ್ನಮನೇ ಗೌಡ.
9. „ ಜೋಗಿ ಚಕ್ರ.
10. „ ಕೆಮ್ಮಣ್ಣ.
11. ಲಕ್ಷ್ಮೀಪುರದ ತಿಮ್ಮೇಗೌಡ.

27. ಮೈಸೂರಿಗೆ, ಮೊಣಕಾಲ[illegible]ಳ ನೀರು ಹರಿದದ್ದನ್ನು ನೋಡಿದಂತೆ ಕೆಲವರಿಗೆ ಜ್ಞಾಪಕವಿದೆ, ಇತರರು, ತಾವು ಸೋಮವಾರ ಸೋಮವಾರ [illegible] ಸಾಗರಕಟ್ಟೇ ಸಂತೆಗೆ ಹೋಗುತ್ತಿದ್ದಾಗ ದಾರೀಯಲ್ಲಿ ಆ ನೀರು ನಿರ್ಮಲವಾಗಿಯೂ, ಮಧುರವಾಗಿಯೂ ಇದ[illegible]ದ್ದರಿಂದ ಅದನ್ನು ಸಾಮಾನ್ಯವಾಗಿ ಕುಡಿಯುತ್ತಿದ್ದರು. ಮತ್ತು ಕಾಲ್ವೆಯಲ್ಲಿ ಜೂನ್ ತಿಂಗಳು ಮೊದಲು ಅ[illegible]ಕ್ಟೋಬರ್ ಯಾ ನವಂಬರ್ ತಿಂಗಳವರಿಗೆ ಕ್ರಮವಾಗಿ 5 ತಿಂಗಳು ನೀರು ಹರಿಯುತಿದ್ದದರಿಂದ ಇದು ಹೊಳೇನ[illegible]ರೇ ಹೊರತು ಮೇಲಿನ ಭೂಮಿಗಳ[illegible] ಹರಿದ ನೀರಲ್ಲವೆಂದು ಸರ್ವರೂ ಅಂಗೀಕರಿಸುತ್ತಾರೆ.

28. ಮು[illegible]ನಾಲೆಯಿಂದ ನಾಗನಹಳ್ಳಿಯಲ್ಲಿ 500ಗಜಗಳ ಫಾಸಲೇಯುಳ್ಳ ಒಂದು ಸಣ್ಣ ಕಾಲ್ವೆ ತೆಗಿಸಲ್ಪಟ್ಟು ಅದಗ[illegible]ಕೆಳಗೆ ಇರುವ ಜಮೀನುಗಳಿಗೆ ನೀರಾವರಿ ಯಾಗುತಿತ್ತು.

29. ಮೈಸೂರಿಗೆ ಇನ್ನೂ ಸಮೀಪದಲ್ಲಿಯೂ ಮತ್ತು 40—41ನೇ ಮೈಲುಗಳ ಮಧ್ಯದಲ್ಲಿ ಮೈಟಗಳ್ಳಿ ಬಳೀಲಿ ಕಾವೇರೀ ನೀರಿನಿಂದ ನೀರಾವರಿ ಮಾಡಲ್ಪಟ್ಟ ದಳವಾಯಿ ತೋಟದಲ್ಲಿಯೂ ತರೀ ಫಸಲು ಇಡಲ್ಪಟ್ಟಂತೆ ಸಹ ರುಜುವಾಗಿದೆ. ಕಾಲ್ವೆಯಲ್ಲಿ ಸಂತತವಾಗಿ ಸೊಂಟಕ್ಕೂ ಆಡಕ್ಕೂ ಹೆಚ್ಚಾದ ಆಳಕ್ಕಿಂತ ಅಧಿಕವಾಗಿಯೇ ನೀರು ಹರಿಯು ತಿದದ್ದರಿಂದ ಬಾಳೇ ಕಂಭಗಳ ತೆಪ್ಪದಮೇಲೆ ಪ್ರತಿದಿನವೂ ಯಾವಸ್ಥಳದಲ್ಲಿ ಕಾಲ್ವೆಯನ್ನ ದಾಟುತಿದ್ದರೋ ಆಸ್ಥಳವನ್ನು ಆತೋಟದಲ್ಲಿ ಕೆಲಸಮಾಡುತಿದ್ದ ರೈತರ ಪೈಕಿ ಕೆಲವರು ನನಿಗೆ ತೋರಿಸಿದರು.

30. ಮೈಸೂರಿಗೆ ಹೋಗುವ ಯೆರಡು ರಸ್ತೆಗಳು ಯಾವ ಸ್ಥಾನದಲ್ಲಿ ಕವಲು ವಡೆಯುತ್ತ ಮತ್ತು ಯಾವ ಸ್ಥಾನದೊಳಗೆ ಪೂರ್ವದಲ್ಲಿ ಚಾಮ-ರಾಜ ಪೇಟೆಯೆಂಬ ಒಂದು ಪೇಟೆ ಯಿತ್ತೋ, ಆಸ್ಥಳ[illegible] ಪದಲ್ಲಿ ಜೆಯಿಲಿನ ಕೆಳಭಾಗಕ್ಕೆ ಸುತ್ತಿಕೊಂಡು ಹೋಗುತ್ತಿರುವ ಕೇಸರಾಯಿ ಕಾಲ್ವೆಯ ಕೆಳಗ[illegible]

ಬಟಾಯಿಗೆ ಯಾ ವಾರಕ್ಕೆ ಭತ್ತ ಸಾಗುವಳೀ ಯಾಗುತ್ತಿತ್ತು. ಈ ಜನಗಳೊಳಗೆ ಹೆಚ್ಚು ಸಂಖ್ಯೆಯ ಜನರು ಸಾಗುವಳೀ ಮಾಡಿದಕಾಲ ಪ್ರಮಾಣವು ಯೆರಡು ವರುಷಗಳೆಂತಲೂ ಮೂರನೇ ವರುಷದಲ್ಲಿ ಫಸಲ್‌ಗಳು ಫಲಕ್ಕೆ ಬರುವದಕ್ಕೆ ಮುಂಚಿತವಾಗಿಯೇ ನೀರುಬರುವದು ನಿಂತು ಹೋಯಿತೆಂತಲೂ ಹೇಳುತ್ತಾರೆ. ಹಾಗೆನಿಂತು ಹೋದದ್ದಕ್ಕೆ 28—29ನೇ ಮೈಲುಗಳ ಮಧ್ಯೆ ಇರುವ ಆಳವಾದ ಕಾಲಿವೆಯೊಳಗೆ ಬಾರ್‌ಬಾರ್ ಬಂಡೇ ಒಡೆಯುವದರಿಂದ ಭೂಮಿ ನಡುಗಿ ಕಾಲ್ವೆಯ ಪಕ್ಕೆಗಳಲ್ಲಿನ ಕಲ್ಲು ಮಣ್ಣು ಕಳಚಿ ಬೀಳುವದರಿಂದ ಕವಿತು ಕೊಳ್ಳುವ ಬೆಟ್ಟಗುಂಡುಗಳ ದೆಸೆಯಿಂದ ನೀರು ಅಟಕಾವ್ ಆದಂತೆ ಬೆಳಗೊಳ ಪ್ರಾಂತ್ಯದ ಜನಗಳು ಹೇಳುತ್ತಾರೆ.

31. ಷುಮಾರ್ ಅದೇಕಾಲದಲ್ಲಿ ನಾಗನಹಳ್ಳಿ ಯೆಂಬ ಸ್ಥಳದಲ್ಲಿ ಕಾಲ್ವೆ ಒಡದು ಹೋಯಿತು; ಮತ್ತು ಆ ಭಾಗದುರಸ್ತಾಗದ ಸಬಬ್ ನೀರು ಆದುವರಿಗೆ ಬಂದಿದ್ದ ಪಕ್ಷಕ್ಕೆ ಮುಂದಕ್ಕೆ ಹರಿಯುವದಕ್ಕಿಲ್ಲದೆ ಅಟಕಾವಾಗಿ ಹೋಗಿಯಿರುವದು.

32. ಈ ಯಂಶಗಳು ನಿಜವೇಯೋ ಯೆಂದು ನಿಶ್ಚಯಿಸುವ ಉದ್ದೇಶದಿಂದ 1800ನೇ ಇಸಿವೀ ಮೊದಲುಗೊಂಡು ಉಂಟಾದ ಲೆಕ್ಕಗಳನ್ನು ಆಜಮಾಯಿಷಿ ಮಾಡಿದ್ದಾಯಿತು. 1809—10ನೇ ಶುಕ್ಲ ಸಂವತ್ಸರದ ಲೆಕ್ಕಗಳಲ್ಲಿ ಕೆಲವು ದಾಖಲೆಗಳವೆ ಅವುಗಳಿಂದ, ಸದರೀ ಸಾಲ್‌ನಲ್ಲಿ 21 ವ 47 ಈ ಮೈಲುಗಳ ಮಧ್ಯೆ ಯಿರುವ ಕೆಲವು ಗ್ರಾಮಗಳೊಳಗೆ 243 ಖಂಡಿ 15 ಕೊಡೊ 2 ಪಡಿಗಳ ಬೀಜವರೀಯುಳ್ಳ ಜಮೀನ್‌ನಲ್ಲಿ ತರೀ ಸಾಗುವಳೀಯಾದಂತೆ ದಾಖಲೇಗಳವೆ. ಅಷ್ಟಗ್ರಾಮ ತಾಲ್ಲೂಕಿನಲ್ಲಿ ನೀರಾವರೀಯಾದ 144 ಖಂಡೀ ಜಮೀನಿನಲ್ಲಿ ಕಂದಾಯಕ್ಕೆ ಬದಲಾಗಿ 921 ಖಂಡೀ ಭತ್ತ ರಾಜಪಾಲ್ ಬಾಬತು ಸರಕಾರಕ್ಕೆ ಬಂದಿರುತ್ತೆ. ಇದರ ತಪಶೀಲ್ ಹ್ಯಾಗಂದರೆ.:—

		ಸಾಗುವಳಿಯಾದ ಬೀಜವರಿ. ಖಂ.	ಕೊ.	ಪ.	ಸರ್ಕಾರಕ್ಕೆ ಬಂದ ಭತ್ತ. ಖಂ.	ಕೊ.	ಪ
	ಅಷ್ಟಗ್ರಾಮ ತಾಲ್ಲೂಕು.						
20 ವ 21ನೇ ಮೈಲ್ ..	ಹೊಂಗಹಳ್ಳಿ ..	60	15	1	506	5	0
24 ವ 25ನೇ ಮೈಲ್ ..	ಬಲಮುರಿ ..	47	14	10	193	14	2
26 ವ 27ನೇ ಮೈಲ್ ..	ಹುಲಿಕೆರೆ ..	5	5	4	39	18	12
ಡಿಟ್ಟೋ	ಬೆಳಗೊಳ ..	4	2	1	58	17	4
34 ವ 35ನೇ ಮೈಲ್ ..	ಪುರ ..	6	17	11	31	7	8
	ಅಣಿಗನಹಳ್ಳಿ ..	13	8	0	42	19	8
	ಮಗರೇನಹಳ್ಳಿ ..	5	3	10	38	8	0
	ಜಕ್ಕನಕುಪ್ಪೆ ..	6	15	2	9	9	4
	ಜುಮ್ಲಾ....	144	16	4	921	0	0
	ಮೈಸೂರು ತಾಲ್ಲೂಕು.						
30 ವ 36ನೇ ಮೈಲ್ ..	ಲಕ್ಷ್ಮೀಪುರ ..	6	13	0	0	0	0
	ನಾಗನಹಳ್ಳಿ ..	54	2	8	0	0	0
	ಸಾದೇನಹಳ್ಳಿ ..	9	16	3	0	0	0
	ಸಿದ್ದಲಿಂಗಾಪುರ ..	0	0	0	ಗೊತ್ತಿಲ್ಲ.		
	ಮೈಟಗಳ್ಳಿ ..	28	7	3			
	ಬೆಳವಟ್ಟ ..	0	0	0			
	ಜುಮ್ಲಾ....	98	18	14	0	0	0
	ಒಟ್ಟು ಜುಮ್ಲಾ..	243	15	2	0	0	0

33. ಸರ್ 1810–11ನೇ ಪ್ರಮೋದೂತ ಸಂವತ್ಸರದ ಬಾಬತು ಬದಸ್ತೂರ್ ತಖ್ತೆಯಲ್ಲಿ 21ನೇ ಮೈಲಿ
ಗೂ 35ನೇ ಮೈಲಿಗೂ ಮಧ್ಯೆ ಇರುವ ಕೆಲವು ಗ್ರಾಮಗಳೊಳಗೆ ಆದ ಉತ್ಪತ್ತಿ ಪೈಕಿ ರಾಜಪಾಲ್ ಬಾಬತು ಸ
ರ್ಕಾರಕ್ಕೆ 413 ಖಂಡೀಗಳ ಭತ್ತ ಬಂದಿರುತ್ತೆ, ಇದರ ತಪಶೀಲ್ ಹ್ಯಾಗೆಂದರೆ:—

	ಅಪ್ಪಗ್ರಾಮ ತಾಲ್ಲೂಕು	ಸರ್ಕಾರಕ್ಕೆ ಬಂದ ಭತ್ತ ಖಂ.	ಕೊ.	ಪ.
		306	14	12
	ಹೊಂಗಹಳ್ಳಿ	41	12	0
21ನೇ ವ 22ನೇ ಮೈಲ್	ಬಲಮುರಿ	4	0	0
24ನೇ ವ 25ನೇ ಮೈಲ್	ಹುಲಿಕೆರೆ	3	2	12
26ನೇ ವ 27ನೇ ಮೈಲ್	ಬೆಳಗೊಳ	14	4	1
ಡಿಟೋ	ಪುರ	0	0	0
	ಅಣ್ಣಿಗಾನಹಳ್ಳಿ	44	4	4
	ಮಗರೇನಹಳ್ಳಿ	0	0	0
	ಜಕ್ಕನಕುಪ್ಪೆ			
34ನೇ ವ 35ನೇ ಮೈಲ್	ಜುಮ್ಲಾ.	413	18	12

34. ಮೈಸೂರು ತಾಲ್ಲೂಕಿನಲ್ಲಿ 35ನೇ ಮೈಲಿಗೆ ಚಿಗೆ ನೀರಾವರಿಯಾದ ಜಮೀನುಗಳು 86 ಖಂಡುಗ
1 ಕೊಡೋ, 3 ಪಡಿ ಇದ್ದವು, ಹ್ಯಾಗಂದರೆ.

		24	7	8
	ಲಕ್ಷ್ಮೀಪುರ	30	15	0
	ನಾಗನಹಳ್ಳಿ	9	15	0
35ನೇ ವ 36ನೇ ಮೈಲ್	ಸಾದೇನಹಳ್ಳಿ	0	0	0
	ಸಿದ್ದಲಿಂಗಾಪುರ	0	0	10
37ನೇ ವ 38ನೇ ಮೈಲ್	ಮೈಟಗಳ್ಳಿ	20	3	11
40ನೇ ವ 41ನೇ ಮೈಲ್	ಬೆಳವಟ್ಟ	0	0	0
	ಸುಂದಹಳ್ಳಿ			
42ನೇ ವ 44ನೇ ಮೈಲ್	ಜುಮ್ಲಾ....	86	1	3

35. ಸರ್ 1809–10ನೇ ಇಸವಿಯಲ್ಲಿ ಕೇಸರಾಯಿ ಕಾಲ್ವೆ ಕೆಳಗೆ ಸಾಗುವಳೀಯಾದ ತರೀ ಜಮೀನಿನ
ಬೀಜವರಿಯು, ರೆಕಾರ್ಡ್ ನಾಶವಾದ್ದರಿಂದ ಇಷ್ಟೆಂತ ಗೊತ್ತಾಗಿರುವದಿಲ್ಲವು. ಪರಂತು ಕೆಲವರು ತಮ್ಮಿಂದ ಸಾ
ಗುವಳಿಯಾದ ಜಮೀನುಗಳನ್ನು ತೋರಿಸುತ್ತಾರೆ, ಮತ್ತು 15 ಮೈಲ್‌ಗಳ ಕಾಲ್ವೆ ಕೆಳಗೆ ಇರುವ ನೀರಾವರೀಯಾ,
ಗತಕ್ಕ ಜಮೀನು ಪೈಕಿ ಪ್ರಾಯಶಃ ಅರವಾಸಿ ಮಟ್ಟಿಗೆ ಬಟಾಯಿ ಸಾಗುವಳೀಯಾದಂತೆ ಮುದುಕರಾದ ಗ್ರಾಮಸ್ಥ
ರ ಪೈಕಿ ಕೆಲವರು ಹೇಳುತ್ತಾರೆ.

36. ಸದರೀ ಕಡೇ ತಖ್ತೆ ಸಂದೇಹಾಸ್ಪದವೆಂತ ಎಣಿಸುತ್ತೇನೆ. ಆದರೆ, ಸರ್ 1808 –9ನೇ ವಿಭವ ಸಂವತ್ಸ
ರದ ಲೆಖ್ಖದಿಂದ ದಾಖಲೆ ಬಂದಿರುವ ಪ್ರಕಾರ ಕೆಲವು ಮಟ್ಟಿಗೆ ಹಾಗೆ ಸಾಗುವಳೀಯಾದಂತೆ ವ್ಯಕ್ತವಾಗುತ್ತೆ.
ಲಕ್ಷ್ಮಣತೀರ್ಥ ಹೊಸಕಟ್ಟೆಗೂ, ಕೇಸರಾಯಿಕಾಲ್ವೆ ಮೇಲಣ ದೇವನೂರು ಕೆರೆಗೂ, ಮಧ್ಯೆ 84 ವರ
ಗಳ ಕಂದಾಯವುಳ್ಳ 278 ಖಂಡೀಗಳಿಗಿಂತ ಜಾಸ್ತೀಯಾದ ಖುಷ್ಕೀ ಜಮೀನು ತರೀ ಸಾಗುವಳೀ ಕೆಳಗೆ ತರ

ಟ್ಟಿಂತೆಯೂ, ಹೊಸದಾಗಿ ತರೀ ಸಾಗುವಳೀ ಕೆಳಗೆ ಬಂದ "ಬೆಂಗಾಡು" ಯಾ ಬಂಜರ್ ಜಮೀನ್ನಲ್ಲಿ ಆದ ಫಸಲ್ ಪೈಕಿ ಮೂರರಲ್ಲೊಂದಂಶ ಅಂದರೆ 1390 ಖಂಡೀ 4 ಕೊಳಗ, 8 ಪಡಿ, ಶಿವಾಯಿ ಸದರೀ ಜಮೀನಿಂದ 713 ಚಿಲ್ಲರ್ ಖಂಡೀಗಳ ಭತ್ತ ಬಂದಿರುವದಾಗಿಯೂ ಸದರೀ ಲೆಕ್ಕದಲ್ಲಿ ನಮೂದಿದೆ.

37. ಸನ್ 1810ನೇ ಇಸವಿ ಫಿಬ್ರವರೀ ಮಾಹೇಯಲ್ಲಿ ಹೂಳು ತೆಗೆಯಿಸುವದು, ಜರೂರಾದ ಕಡೆಯಲ್ಲಿ ತೂಬುಗಳೂ, ಕಲ್ಲುಗಳೂ, ಇಟ್ಟು ಹೊಲಗಳಿಗೆ ನೀರು ಬಿಡುವದಕ್ಕೆ ಹುಕ್ಕುಂ ಆಯಿತು. ಈ ಕಾಮಗಾರೀಗಳಿಗೂ ದೇವನೂರು ಕಾಲ್ವೆಗೂ 1293 ವರಹಾಗಳು ವೆಚ್ಚವಾಗಿದೆ. ಆನಂದೂರಿಗೂ, ದೇವನೂರಿಗೂ, ಮಧ್ಯೆ ಚಾನೆಲ್‌ಕನ್ಸರ್ವಾನ್ಸಿ ಯಾನೇ ನಾಲಾ ಸಂರಕ್ಷಣೇ ಬಗ್ಯೆ ಒಂದು ವಿಶೇಷ ಶಿಬ್ಬಂದಿಯು ಇದರ ಪಕ್ಕದಲ್ಲಿ ಕಂಡ ಪ್ರಕಾರ ಪೂರ್ವವೇ ಯೇರ್ಪಾಡಾಗಿತ್ತು.

	ವ.—ಹ.	
1 ಶೇಕದಾರ್	3—0	ಆನಂದೂರು ಭಾಗಕ್ಕೆ.
1 ಮಣೇಗಾರ್	1—5	
1 ಮಣೇಗಾರ್	1—0	
1 ಶಾನಭಾಗ	2—0	
1 ಅದ್ದಿಕ	1—0	
1 ಅದ್ದಿಕ	1—0	
8 ಸವಾದಿಗಳು ದರ ಇಸಂ		
3 ಹಣ ಪ್ರಕಾರ ..	2—4	
ಜುಮ್ಲಾ ..	11—9	

1 ಶೇಕದಾರ್	1—0	ಬೆಳವಟ್ಟದಿಂದ ದೇವನೂರು ಕಾಲುವೆ ಅಥವಾ ಕೇಸರಾಯಿ ಕಾಲುವೆಯ ವರೆಗೆ.
1 ಶಾನಭಾಗ	1—5	
1 ಅದ್ದಿಕ	1—0	
1 ಅದ್ದಿಕ	1—0	
4 ನೀರುಗಂಟಿ ದರ ಇಸಂ		
3 ಹಣ ಪ್ರಕಾರ ..	1—2	
ಜುಮ್ಲಾ ..	5—9	

38. ಆನಂದೂರು ಶಿಬ್ಬಂದಿ ಇಟ್ಟುಕೊಳ್ಳಲ್ಪಟ್ಟಿತು, ಪರಂತು ಕೇಸರಾಯಿ ಭಾಗದ ಶಿಬ್ಬಂದಿಯು ಅನಾವಶ್ಯಕವಾದ್ದರಿಂದ 1814ನೇ ಇಸವಿಯಲ್ಲಿ ಮೌಕೂಫ್ ಮಾಡಲ್ಪಟ್ಟಿತು.

39. ಕಾಲ್ವೆಯಿಂದ ನೀರು ಮೈಸೂರಿಗೆ ಬಂತೆಂಬ ವಿಷಯವು ನಾನು ತಿಳಿಸಿದ್ದರ ಮೇಲೆ ಇನ್ನೂ ಆಕ್ಷೇಪಿಸಲ್ಪಡುವದೆಂದು ನಾನು ಭಾವಿಸಲಾರೆನು. ನೀರು ಜಮಾಯಿಸಲಿಕ್ಕೋಸ್ಕರ ದೊಡ್ಡಕೆರೆ ಉದ್ದೇಶಿಸಲ್ಪಟ್ಟಿತೆಂದು ಭಾವಿಸಿದ್ದರಿಂದಲೂ, ಬೆಳಗೊಳದಲ್ಲಿ ಬಂಡೇ ಕತ್ತರಿಸಿದ ಹಳ್ಳದಲ್ಲಿ ಯ ಕಾಲ್ವೆಯ ತಳವನ್ನು ಕುರಿತು ತಿಳಿಯಬಂದ ಸಂಗತಿ ನ್ಯೂನವಾಗಿ ಇದ್ದದರಿಂದಲೂ, ಸದರೀ ತಪ್ಪು ಉಂಟಾಗಿರುತ್ತೆ.

40. ಈ ಬಂಡೆಯ ದೆಸೆಯಿಂದ ಉಂಟಾದ ನಿರೋಧವು ಬಹಳ ಪ್ರಬಲವಾಗಿದ್ದಂತೆ ತಿಳಿಯ ಬರುತ್ತೆ. ಹ್ಯಾಗಂದರೆ, ಸದರೀ ಕಾಮಗಾರೀ ನಿಂತು ಹೋಗುವದೆಂದು ಹೆದರಿದ ತಿಪ್ಪಯ್ಯ ವಗೈರೇರು ಆ ಸಂಗತಿಯನ್ನು ಪೂರ್ಣಯ್ಯನವರಿಗೆ ತಿಳಿಸಲು ಅವರು ಆಕರವೆಂಬ ಸ್ಥಳದಲ್ಲಿ ಗುಡಾರ ಹೊಯಿಸಿ ಸದರೀ ಸ್ಥಳವನ್ನು ಹೋಗಿ ನೋಡಿ ಯೆಷ್ಟು ಲಾಗವಡು ತಗಲಿದಾಗ್ಯೂ ಕಾಮಗಾರೀ ನಡೆಯತಕ್ಕದ್ದೇ ಸರಿಯೆಂದು ಗೊತ್ತು ಮಾಡಿ ಆ ಮೇರೆ ನಡೆಯುವ ಬಗ್ಯೆ ಕೆಲವು ಕಾಲ ಅಲ್ಲಿಯೇ ತಾವು ಖುದ್ದು ಇದ್ದರು.

41. ಈ ಕಾಮಗಾರೀಯನ್ನು ಪೂರ್ಣಯ್ಯನವರು ನೆರವೇರಿಸಿದರೆಂಬ ಅಂಶದಲ್ಲೂ, ಕಾಲ್ವೆಯಲ್ಲಿ ಮೇಲಿಂದ ಬಿದ್ದ ಕಲ್ಲುಗಳನ್ನೂ, ಗುಂಡುಗಳನ್ನೂ, ತೆಗಸಿ ಹಾಕುವದಕ್ಕಿಂತ ಹೆಚ್ಚಾಗಿ ಅಗಿಸಬೇಕಾದ ಜರುರಿಲ್ಲವೆಂತ ಮೇ॥ ಕೊ ಹಾರ್ನಯವರು 1865ನೇ ಇಸವಿಯಲ್ಲಿ ರಿಪೋರ್ಟು ಮಾಡಿದ್ದು ಸರಿಯಾಗಿತ್ತೆಂಬ ಅಂಶದಲ್ಲೂ, ನನಗೆ ಸಂದೇಹವಿಲ್ಲವು. ವಿಸ್ತಾರವಾಗಿ ಕಲ್ಲುಗಳು ಗುಂಡುಗಳು ಜರಿಗಿ ಬಿದ್ದಂತೆ ಗ್ರಾಮಸ್ಥರು ಹೇಳುವ ಅಂಶಗಳಿಗೆ ಸದರೀ ಅಭಿಪ್ರಾಯವು ತಾಳೇ ಬೀಳುವದಲ್ಲದೆ ಕಾಲ್ವೆಯ ತಳದಲ್ಲಿ ಅಗಿಯಿಸಿ ಅಜಮಾಯಿಷೀ ಮಾಡಿದ್ದರಿಂದ ಸ್ಥಿರಪಡಿಸಲ್ಪಟ್ಟಿತು. ತುಂಬಿ ಯಿರತಕ್ಕ ಹೂಳೆಂಬದು ಪಕ್ಕಗಳಿಂದ ಕಳಚಿ ಬಿದ್ದ ನುರಿಗಲ್ಲು ಚೆಕ್ಕೆಗಳೇ ಹೊರತು ಇನ್ನು ತೆಗದು ಹಾಕಬೇಕಾಗಿಬಾಕೀಯಿರುವ ಘಟ್ಟಿ ಕಲ್ಲುಗಳಲ್ಲವೆಂದು. ವ್ಯಕ್ತವಾಗುತ್ತದೆ.

42. ಕಾಲ್ವೆಗಳಿಗೆ ಸಂಬಂಧಿಸಿದ ಯಾವ ಕಾಮಗಾರೀಯನ್ನಾಗಲಿ ವಹಿಸಲಿಕ್ಕೆ ಪ್ರಬಲಗಳಾದ ಯೆರಡು ಆಕ್ಷೇಪಗಳು ಮಾಡಲ್ಪಟ್ಟವೇನಂದರೆ,—ಒಂದನೇದು, ಕಾಲ್ವೆಯಲ್ಲಿ ಹೂಳುತೆಗೆಸಿ ಇಳಿಸಿದರೆ ಕಾವೇರೀ ನದಿ

502

ಯಿಂದ ನೀರು ಬಂದರೂ ಇಲ್ಲದಷ್ಟು ಅತ್ಯಲ್ಪವಾಗಿರುವದು. ಯಾತಕ್ಕಂದರೆ—ತಿಪ್ಪೂರು ಅಣಕಟ್ಟಿ ಬಳಿ ಕಾಲ್ವೆಯ ಮೊದಲು ಭಾಗ 20 ಅಡಿ ಅಗಲ ಮಾತ್ರ ಯಿರುವದರಿಂದಲೂ ಹೆಚ್ಚು ಪ್ರವಾಹ ಬಂದಲ್ಲಿ 3 ಅಡಿಗಳ ಪ್ರಮಾಣ ಮಾತ್ರವೇ ನೀರು ಬರುವದರಿಂದಲೂ, ಲಕ್ಷ್ಮಣ ತೀರ್ಥದ ನೀರು ಸಹಾಯದಿಂದ ಸಹ ಕಟ್ಟೆಯಿಂದ 21ನೇ ಮೈಲಿಗೆ ಆಚೆಗೆ ಸಾಗುವಳೀ ಮಾಡಲಿಕ್ಕೆ ಆಗುವ ದಿಲ್ಲವು.

43. ಕಾಲ್ವೆಯು, ನಾನು ಮೇಲೆ ತಿಳಿಸಿದ ಪ್ರಕಾರ ಪ್ರಥಮತಃ ನೀರಾವರೀ ಕೆಲಸಕ್ಕಾಗಿ ಉದ್ದೇಶಿಸಲ್ಪಟ್ಟದ್ದಲವು. ಕರ್ನಲ್ ವಿಲ್ಕಸ್ ಯವರು ಬರದ್ದೇನಂದರೆ ಮೈಸೂರಿಗೆ ಮೇಲ್ಗಡೆ ಹೊಸದಾಗಿ ಯೇನೂ ಸಾಗುವಳೀ ಉದ್ದೇಶಿಲ್ಪಡಲಿಲ್ಲವು. ಸದರೀ ಪಟ್ಟಣದ ಮೊದಲು, ನಂಜಗೂಡಿಗೆ ಮೇಲ್‌ಭಾಗಕ್ಕೆ ಬಿಟ್ಟು ನದಿಯಲ್ಲಿ ಸೇರುವದಕ್ಕಾಗಿ ಯೆಲ್ಲಿ ಕಾಲ್ವೆಯು ಹರಿಯುತದೋ ಅಂತಾ ಕಪಿಲಾ ನದಿಯ ವರಿಗೆ 12 ಮೈಲ್‌ಗಳ ಫಾಸಲೆಯಿರುತ್ತೆ. ಆ ಪ್ರಾಂತದಲ್ಲಿ ಇದ್ದ ಮಟ್ಟಿಗೆ ವಿಶೇಷ ಜನ ಸಂಖ್ಯೆಯುಳ್ಳ ಕೆಲವು ಗ್ರಾಮಗಳ ಸಮೀಪಕ್ಕೆ ಹೋಗುವಾಗ್ಯೆ ಜಾಸ್ತೀ ನೀರಿನ ಪೈಕಿ ಅನುಭವತಃ ಯುಕ್ತವಾದಷ್ಟು ನೀರನ್ನು ಉಪಯೋಗಿಸುವಂತೆ ತಿಳಿಸಲ್ಪಟ್ಟಿತು.

ಫೋರ್ಟ ಸೆಂಟ ಜಾರ್ಜ ಗವರ್ನಮೆಂಟ ಚೀಫ ಸೆಕರಟೇರಿಯವರಿಗೆ ಬರೆದ 1807ನೇ ಮಾರ್ಚ 27ನೇ ಮುಕ್ಕಾಂ ಲೆಟ್ಟರಿನ 9ನೇ ಕಲಂ.

44. ಪರಂತು ಈಚಿಗೆ ಸ್ವಲ್ಪ ಕಾಲದ ಕೆಳಗೆ ಪೂರ್ಣಯ್ಯನವರು ಸದರೀ ಕಾಲ್ವೆಯ ಕಡೆಗೂ ತೂಬುಗಳು ವಗೈರೇ ಸಾಧನಗಳನ್ನು ಕಲ್ಪಿಸಲಿಕ್ಕೂ, ಜಮೀನುಗಳಿಗೆ ನೀರು ಬಿಡುವಂತೆ ಹುಕುಂ ಮಾಡಲಿಕ್ಕೂ, ತಕ್ಕಂತೆ ಈ ಕಾಮಗಾರೀ ವಿಷಯದಲ್ಲಿ ನಂಬಿಕೆಯನ್ನು ಪಡೆದಿದ್ದರು. ಇದರ ಕಾರಣ ಮಾತ್ರ ವಿವರಿಸಲ್ಪಡ ಬೇಕಾಗಿದೆ.

45. ತಿಪ್ಪೂರ ಅಣಕಟ್ಟೆ ಯೆಂಬದು ಪ್ರಾಚೀನವಾದ ಒಂದು ಕಟ್ಟಣವಾಗಿರುತ್ತೆ. ಪೂರ್ಣಯ್ಯನವರು ಮಾಡಿಸಿದ ಕಾಮಗಾರಿಯು, ಕಾಲ್ವೆಯನ್ನು ಲಕ್ಷ್ಮಣತೀರ್ಥದವರಿಗೆ ಬಡಾಯಿಸುವದರಲ್ಲಿ ಮಾತ್ರ ನಡೆದದ್ದಾಗಿದೆ. ಇದಕ್ಕೆ ಪೂರ್ವ ಅಂದರೆ 1804—5ನೇ ಇಸವೀ ಒಳಗೆ ಕರ್ನಲ್ ವಿಲ್ಕಸ್ ಯವರು ತಿಳಿಸಿದ ಪ್ರಕಾರ ಕಾಲ್ವೆ ಕೆಳಗೆ 131 ಖಂಡೀಗಳು ಸಾಗವಳೀ ಮಾಡಲ್ಪಟ್ಟಿತು.

46. ಪರಂತು ಯಡತೊರೇ ಅಮಲ್ದಾರು, ಅದಕ್ಕಿಂತ ಹೆಚ್ಚಾಗಿ ಸಾಗುವಳೀಯಾದಂತೆ ತೋರಿಸತಕ್ಕ ಯಾಕೆಳಗೆ ಬರುವ ತಖ್ತೆಯನ್ನು ಕೊಟ್ಟಿದ್ದಾರೆ. ಆದರೆ ಖಂಡಗದ ಅಳತೆಯು ವ್ಯತ್ಯಾಸವಾಗಿ ಇದ್ದೀತು.

ನಂ.	ಗ್ರಾಮಗಳ ಹೆಸರು	1804—5ನೇ ಇಸವಿಯಲ್ಲಿ ಸಾಗುವಳಿಯಲ್ಲಿದ್ದ ಬೀಜವರಿ.			1804—5ನೇ ಇಸವಿಯಲ್ಲಿ ಬಂದ ಕಂದಾಯ.		
		ಖಂ.	ಕೊ.	ಪ.	ರೂ.	ಆ.	ಪೈ.
1	ತಿಪ್ಪೂರು	93	0	0	922	5	10
2	ಗೋರಗುಂಡಿ	6	17	0	63	13	8
3	ಕನಕನಹಳ್ಳಿ	17	10	0	139	7	4
4	ಸಾಲಿಗ್ರಾಮ	6	0	0	65	0	5
5	ನಾರಾಯಣಪುರ	6	19	4	91	12	0
6	ಕಾಮಯ್ಯನ ಹಳ್ಳಿ	20	13	0	117	6	10
7	ಕೆಗ್ಗೆರೆ	20	17	0	255	8	11
8	ಸಾವತಹಳ್ಳಿ	1	7	8	19	13	6
9	ದಗ್ಗನಹಳ್ಳಿ	10	11	12	108	5	3
10	ಕುಂದೂರು	11	15	8	185	0	0
11	ಕಲ್ಲಹಳ್ಳಿ	20	10	0	315	6	
12	ವಡ್ಡರಹಳ್ಳಿ	7	12	8	117	10	
	ಜುಂಲಾ	223	13	8	2401		

503

47. ತಿಪ್ಪೂರ್ ಕಾಲ್ವೆ ಕೆಳಗೆ ಹಾಲೀ ನೀರಾವರೀಯಲ್ಲಿರುವ ಜಮೀನಿನ ಕುಲ್ ಬೀಜವರಿಯು 521 ಖಂಡಿ, 7 ಕೊಡೊ, 13¾ ಪಡಿಯಾಗಿರುತ್ತೆ. ಇದರ ಕಂದಾಯವು ರೂ. 5,748—11—7, ಅಥವಾ 1804—5ನೇ ಇಸವಿಯಲ್ಲಿ ಆದ್ದಕ್ಕೆ ಜಾಸ್ತೀಯಾಗಿ 2077 ರೂಪಾಯಗಳು ಕಂಡು ಬಂದಿರುತ್ತೆ. ಯಾವ ಗ್ರಾಮಗಳಲ್ಲಿ ಈಗ ತರೀ ಸಾಗುವಳೀ ಯಾಗುತ್ತೋ ಮತ್ತು ಯಾವ ಗ್ರಾಮಗಳಲ್ಲಿ ಕಂದಾಯ ಜಾಸ್ತೀಯಾಗಿರುತ್ತೋ ಪ್ರತಿ ವೊಂದು ಗ್ರಾಮಗಳ ಹೆಸರುಗಳು ಈ ಕೆಳಗೆ ಬರುವ ತಖ್ತೆಯಲ್ಲಿ ತೋರಿಸಲ್ಪಟ್ಟಿರುತ್ತವೆ.

ನಂ.	ಗ್ರಾಮಗಳ ಹೆಸರು.	1873—74ನೇ ಇಸವಿಯಲ್ಲಿದ್ದ ಬೀಜವರಿ.			1873—74ನೇ ಇಸವಿಯಲ್ಲಿ ವಸೂಲಾದ ಕಂದಾಯ.		
		ಖಂ.	ಕೊ.	ಪ.	ರೂ.	ಆ.	ಪೈ.
1	ತಿಪ್ಪೂರು						
2	ಗೋರಗುಂಡಿ	247	16	10¾	2644	14	6
3	ಕನಕನಹಳ್ಳಿ	6	2	10	21	6	11
4	ಸಾಳಿಗ್ರಾಮ	17	2	0	200	14	5
5	ನಾರಾಯಣಪುರ	9	14	8½	115	14	8
6	ಕೋಮ್ಮೆನಹಳ್ಳಿ	2	12	8	40	1	7
7	ಕೆಗ್ಗೆರೆ	19	3	6¾	210	7	8
8	ಸಾವತಹಳ್ಳಿ	15	17	5	176	13	7
9	ದಗ್ಗನಹಳ್ಳಿ	7	0	1¾	75	11	3
10	ಕುಂದೂರು	10	11	12	108	5	3
11	ಕಲ್ಲಹಳ್ಳಿ	73	14	0	729	15	2
12	ವಡ್ಡರಹಳ್ಳಿ	88	16	14	826	4	4
		25	7	4	327	14	3
	ಜುಂಲಾ....	523	19	0¾	5478	11	7

48. ಲಕ್ಷ್ಮಣತೀರ್ಥ ಅಣಕಟ್ಟೆಯಿಂದ 17ನೇ ಮೈಲ್ ವರಿಗೆ ಹಾಲೀ ತರೀ ಸಾಗುವಳೀಯಲ್ಲಿರುವ ಜಮೀನ್ ಬೀಜವರಿಯು 337 ಖಂಡೀ, ಇದರ ಕಂದಾಯವು 4952 ರೂಪಾಯಿ 5 ಆಣೆ 2 ಪೈ, ಇದಕ್ಕೆ, 1864ನೇ ಇಸವಿಯಲ್ಲಿ ಒಡೆದು ಹೋದ ಚೋಳೇನಹಳ್ಳಿ ಅಣಕಟ್ಟೆಯಿಂದ ನೀರಾವರಿಯಾಗುತಿದ್ದು ಹಾಲೀ ಆನಂದೂರು ಕಾಲ್ವೆಯಿಂದ ನೀರು ಹರಿಯುವ ಜಮೀನ್‌ಗಳು * ಸೇರಿಸಲ್ಪಡತಕ್ಕವು.

* 101 ಖಂಡಿ, 19 ಕೊಡೊ 4 ಪಡಿ, ಕಂದಾಯ 1567 ರೂ. 13 ಆಣೆ. 0 ಪೈ.

49. ಆದ್ದರಿಂದ ಹಾಲೀ ಸಾಗುವಳೀಯಲ್ಲಿರುವ ಜಮೀನಿನ ಕುಲ್ ಬೀಜವರೀ 439 ಖಂಡಿ, 11 ಕೊಡೊ, 10½ ಪಡಿ; ಕಂದಾಯ, 6520 ರೂಪಾಯಿ 2 ಆಣೆ 2 ಪೈ. ತಿಪ್ಪೂರಿಂದ ಮೈಸೂರು ವರಿಗೆ ಇರುವ ವಿಶಿಷ್ಟ ಕಾಲ್ವೆಯ ಕೆಳಗೂ ಇರತಕ್ಕ ಬೀಜವರಿಯನ್ನು ಮೊಕ್ಕಾಬಿಲೆ ಮಾಡುವಲ್ಲಿ, ಮೈಸೂರಿಗೆ ನೀರು ಬಂತೆಂಬ 1808—9ನೇ ಯಿಸವೀಯಲ್ಲಿದ್ದದಕ್ಕಿಂತ ಈಗ ಪ್ರಾಯಶಃ 555 ಖಂಡೀಗಳು ಜಾಸ್ತೀಯಾಗಿ ಸಾಗುವಳೀಯಲ್ಲಿರುತ್ತೆ. ಪ್ರಾಯಶಃ ಇದರಿಂದಲೇ 21ನೇ ಮೈಲಿಗಿಂತ ಆಚೆಗೆ ನೀರು ತೆಗದುಕ್ಕೊಂಡು ಹೋಗುವ ಅಂಶ ಕಷ್ಟವಾಗಿ ಇದೆ.

ನಂ.		1808–9ನೇ ಇಸವಿಯಲ್ಲಿ ಸಾಗುವಳೀಯಾದ ಬೀಜವರಿ.						ಹಾಲೀ ಸಾಗುವಳೀಯಲ್ಲಿರುವ ಬೀಜವರಿ.						ವ್ಯತ್ಯಾಸ.											
		ಬೀಜವರೀ.			ಕಂದಾಯ.			ಬೀಜವರೀ.			ಕಂದಾಯ.			ಜಾಸ್ತೀ.						ಕಮ್ಮಿ.					
		ಖಂ.	ಕೊ.	ಪ.	ರೂ.	ಆ.	ಪೈ.	ಖಂ.	ಕೊ.	ಪ.	ರೂ.	ಆ.	ಪೈ.	ಬೀಜವರೀ.			ಕಂದಾಯ.			ಬೀಜವರೀ.			ಕಂದಾಯ.		
1	ತಿಪ್ಪೂರಿಂದ ಲಕ್ಷ್ಮಣ ತೀರ್ಥದ ವರಿಗೆ	129	13	8	1709	4	11	523	19	$\frac{3}{4}$	5478	11	7	407	0	$3\frac{3}{4}$	3962	14	0	12	14	11	194	7	4
2	ಲಕ್ಷ್ಮಣ ತೀರ್ಥದಿಂದ ದೇವನೂರು ಕೆರೆ ವರಿಗೆ ..	278	19	6	0	0	0	439	11	$10\frac{1}{2}$	0	0	0	160	12	$4\frac{1}{2}$	0	0	0	0	0	0	0	0	0
	ಜುಂಲಾ....	408	12	14	6709	4	11	963	11	$11\frac{1}{4}$	5478	11	7	567	12	$8\frac{1}{4}$	3962	14	0	12	14	11	194	7	4
											ನಿವಳ			554	17	$13\frac{1}{4}$	0	0	0	0	0	0	0	0	0

50. ಎರಡನೇ ಆಕ್ಷೇಪಣೆ ಯೇನಂದರೆ ಹಾಲೀ ನೀರಾವರೀ ಬಗ್ಯೆ ಬಿಡಲ್ಪಡುವ ವಿಶಿಷ್ಟ ನೀರೂ ಆಟಕಾಯಿಸಲ್ಪಟ್ಟು ಪೂರ್ಣಯ್ಯನವರ ಕಾಲ್ವೆ ಕೆಲಸ ಪೂರೈಸಲ್ಪಟ್ಟರೆ ಅತ್ಯಂತ ಅಧಿಕವಾದ ಪ್ರವಾಹದಲ್ಲಿ ತೊಟ್ಟು ತೊಟ್ಟಾಗಿ ನೀರು ಬಂದಾಗ್ಯೂ ಅನ್ಯಥಾ ಕಾವೇರೀಯಿಂದ ಮೈಸೂರಿಗೆ ಪ್ರಾಯಶಃ ಬಂದು ಬಿಂದು ನೀರು ಕೂಡಾ ಬರಲಾರದು, ಯಾಕಂದರೆ ಮೈಲಿಗೆ ಕೊಂಚವಾಗಿ ಅಂದರೆ 3 ಅಂಗುಲ ಮಾತ್ರವೇ ನೀರು ವಾಟವಿರುವದರಿಂದಲೂ; ನೀರು ಹೋಗುವ ಮಾರ್ಗದಲ್ಲಿರುವ ಬಂಡೆಗಳು ಬಿರುಕಲಾಗಿರುವದರಿಂದಲೂ, ನೀರು ಹಬೆಯಾಗಿ ಯೆದ್ದು ಹೋಗುವಣ, ಹೀರಿಹೋಗುವಣ, ಇವುಗಳಿಂದ ಪ್ರಾಯಶಃ ನೀರೆಲ್ಲ ನಷ್ಟವಾಗಿ ಹೋಗುವದು.

51. ಮೈಸೂರು ವರಿಗೆ ನೀರು ಬಂತೆಂದು ಮೇಲೆಯೇ ಸೂಚಿಸಲ್ಪಟ್ಟದೆಯಷ್ಟೆ, ಇಲ್ಲಿ ಕೊಂಚ ವಾಟವೆಂಬದು ದೊಡ್ಡ ಕೆರೆಯ ಕೋಡೀಯನ್ನು ಕುರಿತದ್ದಾಗಿರುತ್ತದೆಂತಲೂ ಕಾಲ್ವೆಯಲ್ಲಿ ತರಲ್ಪಟ್ಟ ನೀರು ಅನ್ಯಥಾಜಪಾಯಿಸಲ್ಪಡುವದೊ ಯಾ ಉಪಯೋಗಿಸಲ್ಪಡುವದೋ ಪರಂತು ಸದರೀ ಕೆರೆಗೆ ನೀರು ತರುವದು ಅಸಾಧ್ಯವಾಗಿರುವ ಸಂಗತಿ ಈ ವಿಷಯವನ್ನು ವ್ಯವಸ್ಥೆ ಪಡಿಸುವದಿಲ್ಲವೆಂತಲೂ ಮಾತ್ರ ಪುನಃ ನಾನು ತಿಳಿಸಬೇಕಾಗಿದೆ.

52. ಕೆಲವು ತಿಂಗಳ ಕೆಳಗೆ ರಾಜಪೂತ್ ಘಾಟೀಯಲ್ಲಿ ನಿಂತಿದ್ದ ನೀರಿನ ಮಟ್ಟವು ದೊಡ್ಡ ಕೆರೆ ಕೋಡಿಯ ಮಟ್ಟಕ್ಕೆ ಮೇಲ್ಗಡೆ 15 ಅಡಿಗಳಿದ್ದವು. ಅರ್ಯಟೀಯಲ್ಲಿ 17 ಅಡಿಗಳ ನೀರು ನಿಂತಿತ್ತು.

53. ಪರಂತು ನೀರು ತರುವ ಅಂಶದಲ್ಲಿ ಯುಂಟಾದ ಸಾಧ್ಯತೆ ಸಾಲದೆ ಇರುವದನ್ನು ಪೂರ್ಣಯ್ಯನವರೂ, ಅವರ ಸಲಹೇದಾರರೂ ಆಲೋಚಿಸಿ, ತಿಪ್ಪೂರ್ ವ ಸಾಗರಕಟ್ಟೆ ಅಣೆಕಟ್ಟೆಗಳ ಬಾಬತು ಸೇರಿಕೆಯಾದ ಕಾಲ್ವೆಗಳನ್ನು ವಿಶೇಷವಾಗಿ ಹೆಚ್ಚು ಪಡಿಸಬೇಕೆಂದು ಯೆಣಿಸಿದಂತೆ ಚನ್ನಾಗಿ ವ್ಯಕ್ತವಾಗುತ್ತೆ. ಈ ವಿಶಿಷ್ಟ ಪ್ರಯತ್ನವೂ ಎತ್ತರವಾಗಿರುವ ಚುಂಚನ ಕಟ್ಟೆ ಅಣೆಕಟ್ಟೆಯಿಂದ ರಾಮಸಮುದ್ರದ ಕಾಲ್ವೆಯನ್ನು ಯಡತೊರೆಯ ಆಚೆಗೆ ಬಡಾಯಿಸತಕ್ಕ ಕೆಲಸವಾಗಿರುತ್ತದೆ. ಸದರೀ ಅಣೆಕಟ್ಟೆಯು ದೊಡ್ಡಕೆರೇ ಕೋಡಿಗೆ ಮೇಲೆ 140 ಅಡಿಗಳಿರುತ್ತದೆ, ಮತ್ತು ಚುಂಚನಕಟ್ಟೆ ಅಣೆಕಟ್ಟೆಗೂ ಲಕ್ಷ್ಮಣತೀರ್ಥ ಪಾತ್ರಕ್ಕೂ ಮಧ್ಯೇ ಇರುವ ಕಲ್ಲುಗುಟ್ಟದ ಮಾರ್ಗವಾಗಿ ಭೇದಿಸಿಕೊಂಡು ಸದರೀ ಹೊಳೆಗೆ ಪ್ರಾಯಶಃ ಅಡ್ಡವಾಗಿ ನೀರು ಹೋಗುತ್ತದೆ.

54. ಸರ್ 1801ನೇ ಇಸಿವಿಗೂ 1803ನೇ ಇಸವಿಗೂ ಮಧ್ಯೆ ರಾಮಸಮುದ್ರ ಕಾಲ್ವೆ ಚಂದಗಾಲ್‌ವರಿಗೆ ಬಡಾಯಿಸಲ್ಪಟ್ಟಿತ್ತು, ಮತ್ತು ಚುಂಚನಕಟ್ಟೆಯಿಂದ 24 ನೇ ಮೈಲು ಮೊದಲು ಲಕ್ಷ್ಮಣತೀರ್ಥ ಕಿಬ್ಬಿಯಲ್ಲಿರುವ ಲಾಲನಹಳ್ಳಿ ಕೆರೆಗೆ ಸೇರುವ ಕಾಲ್ವೆಯ ಕೊನೆವರಿಗೆ ಈ ಕಾಲ್ವೆ ಹೋಗತಕ್ಕದ್ದನ್ನು ಅಜಮಾಹಿಷೀ ಮಾಡುವಲ್ಲಿ ಗುಟ್ಟಗಳು ಭೇದಿಸಿಕೊಂಡು ಹೋಗುವ ಮಾರ್ಗದಲ್ಲಿ ನಡೆದ ಕಾಮಗಾರೀಯನ್ನು ನಿಶ್ಚಯಿಸಬಹುದಾಗಿರುತ್ತೆ. ಈ ಕಾಮಗಾರಿಯು ಶುದ್ಧಾಂಗನಿಗೇಯಿಂದ ತಪ್ಪಿಸಿ ಕೊಂಡಂತೆ ಕಾಣಬರುತ್ತೆ.

55. ಕಾಂತೇನಹಳ್ಳಿ ಯೆಂಬ ಗ್ರಾಮವು ಬಂದು ತುಕಡಿಯ ಹೆಡ್‌ಕ್ವಾರ್ಟರಾಗಿತ್ತು. ಅಲ್ಲಿ ಜನಗಳು ಹೆಚ್ಚಾಗಿ ವಾಸಮಾಡುತಿದ್ದದರಿಂದ ದಾರಣೆವಾಸಿ ಬಹಳ ಚಡಾವಾಗಿದ್ದಂತೆ ಜನಗಳು ಅದ್ಯಾ ಪಿಜ್ಞಾಪಕ ವಿಟ್ಟು ಕೊಂಡಿದ್ದಾರೆ. ಬಂಡೆ ಬಡೆಯುವ ಕೆಲಸವು ಅನ್ಯತ್ರ ನಡೆದಂತೆಯೇ ಅಲ್ಲಿಯೂ ವಿಸ್ತಾರವಾಗಿ ನಡೆದಿರುತ್ತೆ. ಅಂದರೆ ಕೆಲವು ಕಡೆ 30 ಅಡಿಗಳ ಆಳ ಇಳಿದದೆ, ಮತ್ತು ಜಲಕಾಣುವ ಪರ್ಯಂತ ಇಳಿದದರಿಂದ ಕೆಲವು ಸ್ಥಳಗಳಲ್ಲಿ ಬೇಸಿಗೆ ಯೊಳಗೆ ಸಹ 6 ಅಥವಾ 9 ಅಡಿಗಳ ನೀರು ಕಾಯಮಾಗಿನಿಂತಿರುತ್ತೆ.

56. ಲಾಲನಹಳ್ಳಿಗೆ ಆಚೆಗೆ ಕಾಮಗಾರಿಯು ಏಕಾಏಕಿ ನಿಂತು ಹೋದಂತೆ ಕಾಣಬರುತ್ತೆ, ಯಾತಕ್ಕಂದರೆ ಸದರೀ ಸ್ಥಳದಿಂದ ಸ್ವಲ್ಪ ಮುಂದಕ್ಕೆ ಯಿರುವ ಲಾಲದೇವನಹಳ್ಳಿ ಯೆಂಬ ಗ್ರಾಮದವರಿಗೆ ಕೇವಲ ನಿಷಾನೇ ಮಾತ್ರ ಇದೆ, ಆದರೆ, ಯಿದಕ್ಕೆ ಅಂತರಾಯ ಸಂಭವಿಸದೆ ಯಿದ್ದರೆ ಈ ಕಾಲ್ವೆಯನ್ನು ಯಿತರ ಕಾಲ್ವೆಗಳೊಂದಿಗೆ ಸೇರಿಸುವ ಪ್ರಯತ್ನವು ಸಂಪೂರ್ಣವಾಗಿ ನೇರವೇರಿಸಲ್ಪಟ್ಟಿರುವದೆಂಬ ಅಂಶವನ್ನು ಸಂದೇಹಿಸಲಿಕ್ಕೆ ನನಗೇನೂ ನಿಮಿತ್ತ ತೋರಲಿಲ್ಲವು. ಹೆಚ್ಚಾಗಿ ನೀರೇನಾದರೂ ಬೇಕಾಗಿಯಿದ್ದರೆ ಸಾಲಿ ಗ್ರಾಮ ಕೃಷ್ಣರಾಜ ಕಟ್ಟೆ ಅಣೆಕಟ್ಟೆಗಳಲ್ಲಿ ನೀರು ಸಿದ್ಧವಾಗಿಯಿತ್ತು, ಸದರೀ ಸ್ಥಳದಿಂದ ಕಾಲ್ವೆ ತರತಕ್ಕದ್ದಕ್ಕೆ ನಿರೋಧಕವಾಗಿ ಚುಂಚನಕಟ್ಟೆಯಲ್ಲಿ ಕಲ್ಲಿನ ಗುಟ್ಟೆ ಯಿದೆ ಯೆಂದೂಹಿಸುವದು ಶುದ್ಧ ತಪ್ಪಾಗಿರುತ್ತೆ, ಮತ್ತು ಈ ಯೆರಡು ಅಣೆಕಟ್ಟೆಗಳ ಕಾಲ್ವೆಗಳನ್ನು ಬಡಾಯಿ ಸೋಣದರಿಂದ, ಜರೂರಿದ್ದ ಪಕ್ಷಕ್ಕೆ, ರಾಮಸಮುದ್ರದ ಕಾಲ್ವೆಯಲ್ಲಿ ವಿಸ್ತಾರವಾಗಿ ನೀರುಬರಬಹುದಾಗಿತ್ತು. ಈ ಸಂಗತಿಗಳನ್ನೆಲ್ಲ ತಿಳಿದಿದ್ದದರಿಂದ ಪೂರ್ಣಯ್ಯನವರು, ಸದರೀ ಕಾಲ್ವೆಯನ್ನು ಕರ್ನಲ್ ಮೆಕ್ಕಂಜೀಯವರಿಂದ ವಿವರಿಸಲ್ಪಟ್ಟ ಮೇರೆ ನೀರು ಹರಿಯತಕ್ಕ ಕೇವಲ ನಲ್ಲಿಯನ್ನಾಗಿ ಮಾಡುವದಕ್ಕೆ ಬದಲಾಗಿ ನೀರಾವರಿಯ ಬಾಬತು ನಾಲೇಯನ್ನಾಗಿ ಕಟ್ಟಿಸುವಂತೆ ಪ್ರೇರಿಸಿತೆಂಬ ಅಂಶದಲ್ಲಿ ಸಂದೇಹವಿಲ್ಲವು. ಸದರೀ ಪ್ರಯತ್ನ ಭಂಗವಾದಂತೆ ಹೇಳಬೇಕಾದರೆ ಅದು, ಇದುವರಿಗೆ ತಿಳಿಸಿದ ಕಾರಣಗಳಲ್ಲದೆ ನಿಶ್ಚಯಿಸಲ್ಪಟ್ಟ ಅಂಶಗಳಿಗೆ ತಾಳೇ ಬೀಳದ ಬೇರೆ ಕಾರಣಗಳಿಂದಾಗಿರಬೇಕು.

57. ಪ್ರಥಮಂತಃ ಮಾಡಲ್ಪಟ್ಟ ಪ್ರಯತ್ನದಿಂದ ಮೈಸೂರು ಮಾರ್ಗವಾಗಿ ಹರಿಯುವ ನೀರು ಕಾಲ್ವೆಯನ್ನು ತರುವ ವಿಷಯದಲ್ಲಿ ಇದನ್ನು ಪ್ರೋತ್ಸಾಹ ಪಡಿಸಿದವರ ಉದ್ದೇಶ್ಯವೆಲ್ಲವೂ ಫಲಿಸಿ ಇರಬಹುದೆಂತಲೂ, ಪರಂತು ತಿಪ್ಪೂರು ಅಣೆಕಟ್ಟೆ ಸಾಕಾದಷ್ಟು ಯೆತ್ತರವಿರುವದಿಲ್ಲವಾಗಿ ಪಟ್ಟಣದಲ್ಲಾಗಲಿ ಆದರ ಸಮೀಪದಲ್ಲಾಗಲಿ ವಿಶೇಷವಾಗಿ ಯೇನೂ ನೀರು ಜಮಾಯಿಸುವದು ಕಷ್ಟವಾಗುವದೆಂತಲೂ ನನಗೆ ತೋರುತ್ತದೆ.

58. ಚುಂಚನಕಟ್ಟೇ ಕಾಲ್ವೆಯ ಬಡಾವಣೆಯು ಸ್ಪಷ್ಟವಾಗಿ ಪಶ್ಚಾದಾಲೋಚಿತ ವಿಷಯವಾಗಿತ್ತು. ಸಾಗರಕಟ್ಟೆಯ ಮೇಲ್ಭಾಗಕ್ಕೆ ಒಂದು ಪ್ರದೇಶದಲ್ಲಿ ಲಕ್ಷ್ಮಣತೀರ್ಥಕ್ಕೆ ಅಡ್ಡವಾಗಿ ಯೆಡತೊರೇ ಬಳಿಯ ಬಂಡೇ ಕಡಿದ ಮಾರ್ಗವಾಗಿಯೂ, ಅಂತಾ ಇನ್ನೊಂದು ಮಾರ್ಗವಾಗಿ, ಚೀಫ್ ಇಂಜನಿಯರವರು ತಿಳಿಸಿದ ಕುಂಟೆಯ ಭರ್ತೀ ಬಗ್ಯೆ ಬೆನ್ನು ಹರದನಹಳ್ಳಿ ಕಿಬ್ಬೆಯಲ್ಲಿಯೂ ನೀರು ತೆಗದುಕೊಂಡು ಹೋಗುವದಕ್ಕೆ ಆಗುವದಿಲ್ಲವೋ ಹ್ಯಾಗೋ ಆ ಸಂಗತಿಯನ್ನು ಎಚ್ಚರದಿಂದ ಅಜಮಾಯಿಷೀ ಮಾಡುವದರಿಂದಲೇ ನಿಶ್ಚಯಿಸಲ್ಪಡಬಹುದಾಗಿರುತ್ತೆ.

59. ಪೂರ್ಣಯ್ಯನವರು ಉದ್ದೇಶಿಸಿದ ಉಪಾಯವನ್ನು ಬಿಟ್ಟು [illegible] ಮಾಡುವದು ಸಾಧ್ಯವೋ ಅಲ್ಲವೋ ಪರಂತು ಸಂಯುಕ್ತವಾದ ಜಲವಸತಿಯ ಸಾಧನವಾಗಿಯೂ ನೀರಾವರೀ [illegible] ಯಾಗಿಯೂ ಇರುವ ಸದರೀ ಕಾಲ್ವೆಯ ಪ್ರಯೋಜನವನ್ನು ಆ ಮೂಲವಾಗಿ ವಿಚಾರಿಸ ಬೇಕಾಗಿದೆ.

60. ಈ ಸಂಗತಿಯನ್ನು ನಾನು ಚನ್ನಾಗಿ ಆಲೋಚಿಸಿ ಇರುತ್ತೇನೆ, ಮತ್ತು ಮೈಸೂರು ಪ್ರಜೆಗಳು ಕೇಳಿಕೊಂಡ ಮೇರೆ ಚೀಪ್ ಕಮಿಷನರವರಿಗೆ ಶ್ರುತ ಪಡಿಸುವದರಲ್ಲಿ, ಸದರೀ ಕೆಲಸವನ್ನು, ಮೈಸೂರಿಗೆ ಜಲವಸತಿ ಕಲ್ಪಿಸುವ ವಿಷಯಕ್ಕೆ ಸಂಬಂಧಿಸಿದ ಪ್ರಯೋಜನಕರವಾದ ಯಾವ ಬಗ್ಯಾಗಲಿ ಉಪಯೋಗಿಸುವದು ಸಾಧ್ಯವೆಂಬ ಅಂಶವನ್ನು ಪುನಶ್ಚ ಪರ್ಯಾಲೋಚಿಸ ಬೇಕಾಗಿರುವದೆಂತಲೂ ನಂಬುತ್ತೇನೆ.

ಹೀಗೆ ತಮ್ಮ ಅತ್ಯಂತ ವಿಧೇಯನಾದ

A. C. HAY,
Commissioner, Ashtagram Division,

ಅಷ್ಟಗ್ರಾಮ ಡಿವೀಜನ್ ಕಮಿಷನರವರಿಂದ 1875ನೇ ಇಸವಿ ಏಪ್ರೆಲ್ 5ನೇ ತಾರೀಖಿನಲ್ಲಿ

ಬಂದ ಮರಮ್ಮತ್ ಇಲಾಖಾ.

7ನೇ ನಂಬರು ಲೆಟರ್ ವಿಷಯದ ಮಿಮೋರಾಂಡಂ.

ಸರ್ವೇಗಳು ಮತ್ತು ಸೆಕ್ಷನ್‌ಗಳು ಇವುಗಳನ್ನು ಕುರಿತ ಕೆಲವು ಹೊಸ ಸಂಗತಿಗಳನ್ನ ತಿಳಿಯುವದು ಜರೂರಾಗಿದ್ದದ್ದರಿಂದ ಅಷ್ಟಗ್ರಾಮ ಡಿವೀಜನ್ ಕಮಿಷನರವರು ಬರೆದ ಸದರೀ ಲೆಟರ್‌ನಲ್ಲಿ ಕಂಡಿರುವಂಥ ಸರ್ಕಾರಿಗೂ ಅಷ್ಟು ಪ್ರಯೋಜನಕರವಾದ ಅಂಶವನ್ನು ಕುರಿತು ವಿಚಾರ ಮಾಡುವದರಲ್ಲಿ ನಿರ್ವಾಹವಿಲ್ಲದೆ ಸಾವಕಾಶವಾದದ್ದಕ್ಕೋಸ್ಕರ ವಿಷಾದಿಸ ಬೇಕಾಗಿದೆ.

2. ಬೆಳಗೊಳದ ಸಮೀಪದಲ್ಲಿ "ಆಕರ" ಎಂಬ ಸ್ಥಳದ ಪಕ್ಕದೊಳಗೆ ಪೂರ್ಣಯ್ಯನವರ ನಾಲೆಯ ಹಾಲೀ ಇರುವ ಪಾತ್ರವು 21ನೇ ಮೈಲ್‌ನಲ್ಲಿ ಇರುವದಕ್ಕಿಂತಲೂ ಒಂಬತ್ತು ಅಡಿ ಎತ್ತರವಾಗಿದ್ದಾಗ್ಯೂ ಇದು ಪೂರ್ವದಲ್ಲಿ ಕ್ರಮ ಕ್ರಮವಾದ ಮಟ್ಟಕ್ಕೆ ಅಥವಾ ಮೇಲ್ಗಡೆಯಿಂದ ನೀರು ಹರಿದು ಹೋಗುವದಕ್ಕೆ ತಕ್ಕಷ್ಟು ಆಳ ಆಗಿಯಲ್ಪಟ್ಟಿತೆಂದು ಸಂಶಯಿಸುವದಕ್ಕೆ ಕಾರಣಗಳಾಗಿ ಇದ್ದ ಸಂದರ್ಭಗಳನ್ನು ಮೇಜರ್ ಹೇ ಸಾಹೇಬರು ಇದರಲ್ಲಿ ತೋರಿಸುವದಲ್ಲದೆ 1809—10 ಮತ್ತು 1810—11ನೇ ಇಸವಿಗಳಲ್ಲಿ ಕೆಲವು ಜಮೀನಿನ ನೀರಾರಂಬದ ಬಗ್ಯೆ ಸಾಕಾದಷ್ಟು ನೀರು ನಿಜವಾಗಿ ಹರಿದು ಇರಬೇಕೆಂತಲೂ ಸದರೀ ಲೆಟರ್‌ನೊಳಗೆ ಇಲ್ಲಿ ಅಲ್ಲಿ ನಮೂದಿಸಿ ಇರುವ ಮೇರೆಗೆ ಮೈಸೂರು ಷಹರು ವರಿವಿಗೆ ಬಾರದೆ ಹೋದಾಗ್ಯೂ ಕ್ರಮೇಣ ದೊಡ್ಡ ಕೆರೆಯಿಂದ ಒಂದು ಮೈಲ್‌ಗಿಂತಲೂ ಹೆಚ್ಚಿಲ್ಲದಷ್ಟು ದೂರ ಬಂದಂತೆ ನಿದರ್ಶನ ಮಾಡಿಕೊಡುವ ಬಗ್ಯೆ ಸಾಕ್ಷ್ಯವನ್ನೂ ಉದಹರಿಸುತ್ತಾರೆ.

